ಅಪರಂಜಿ

ಜೂನ್ 2005

ತಿಳಿನಗೆಯ ಕಾರಂಜಿ



ಪ್ರಕಾಶ್

ಬಾಗೂರು ಚಂದ್ರು

ಡಿ.ವಿ.ಜಿ.

ಬೇಲೂರು ರಾಮಮೂರ್ತಿ

ಎಚ್. ಗೋಪಾಲಕೃಷ್ಣ

ಚಂಬಾ

ಕು.ಕ.

ಎಚ್.ವಿ. ವಿಶ್ವನಾಥ

ಡಿ. ರಮೇಶ್

ಕುಮುದಾ ಪುರುಷೋತ್ತಮ್

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಕೆಲಸದ ವೇಳೆ:

ಬೆಳಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್

ಅಕ್ಷರ ಜೋಡಣೆ:

ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....



ಸಂಪುಟ 22 ಸಂಚಿಕೆ - 9

ಜೂನ್ - 2005

ಪ್ರಕಾಶಕರು: ಕೊರವಂಗಲ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080 - 23345259
email: aparanji@hotmail.com website: aparanjimag.com



○ ಪ್ರಕಾಶ್

ನಿವೃತ್ತ ಡಿ.ವೈ.ಎಸ್.ಪಿ. ಮನೆಯಲ್ಲಿ ಕಳ್ಳತನ

- ಸುದ್ದಿ

ಕಳ್ಳರಿಗೂ ಹಾಸ್ಯಪ್ರಜ್ಞೆ??!

★★★

ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಾಗಿ ಶೋಧ

- ಸುದ್ದಿ

ಅಂದರೆ ಅವರೇನು ಈಗ ಬಚ್ಚಿಟ್ಟುಕೊಂಡಿದ್ದಾರೆ ಅಂತಲೋ!!

★★★

'ಪೂಜಾರಿ ದೇವರಲ್ಲ' : ಶ್ರೀ ಚಂದ್ರೇಗೌಡ

- ಪತ್ರಿಕೆ

ಆಹಾ! ಹೇಳಿಕೆ ಅಂದರೆ ಹೀಗಿರಬೇಕು!

★★★

ಮಾಜೀ ಪ್ರಧಾನಿಯವರು 'ದರಿದ್ರ ನಾರಾಯಣ' ಎಂದು ಪದೇ ಪದೇ ಹೇಳುತ್ತಿರುವುದನ್ನು ನಾರಾಯಣ ಎಂಬ ಹೆಸರಿರುವ ಸಹಸ್ರಾರು ಜನ ಖಂಡಿಸಿದ್ದಾರಂತೆ!!

★★★

'ತಪ್ಪು ಮಾಡಿದೆ, ತಿದ್ದಿಕೊಳ್ಳುವೆ'

- ಇರ್ಫಾನ್ ಪಠಾಣ್

ರಾಜಕೀಯ ಮುಖಂಡರೂ ಹೀಗಾದರೆ ಚೆನ್ನ!!

★★★

'ಕೀಳು' ಆರೋಪಗಳಿಗೆ ಉತ್ತರಿಸುವುದಿಲ್ಲ

- ಚುನಾವಣೆ ಆಯುಕ್ತರು

ಹೌದು, 'ಏಳು' ಆರೋಪಗಳಾದರೂ ಇರಲೇಬೇಕು!!

★★★

ರಿಲಯನ್ಸ್ ಕಲಹ

- ಸುದ್ದಿ

ಇಬ್ಬರಲ್ಲಿ ಯಾರನ್ನ ರಿಲೈ ಮಾಡೋದು?!


★★★


ಧಾರ್ಮಿಕ ಸಂಸ್ಥೆಗಳ ಮೇಲೆ ತೆರಿಗೆ

- ಶೀರ್ಷಿಕೆ

ಇದು ಅಧರ್ಮ!!

★★★





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಕನ್ನಡಿಗರಿಗೆ ಡಿ.ವಿ. ಗುಂಡಪ್ಪನವರು ಪೂರ್ಣಾರ್ಥದಲ್ಲಿ ಪ್ರಾಥಃಸ್ಮರಣೀಯರು - ಬೆಳಿಗ್ಗೆ ರೇಡಿಯೋ ತಿರುಗಿಸಿದರೆ ಆಕಾಶವಾಣಿಯ ಒಂದಲ್ಲ ಒಂದು ಕೇಂದ್ರದ ಚಿಂತನದಲ್ಲಿ ಮಂಕುತಿಮ್ಮನ ಅನುಭವಾಮೃತ ಹರಿದು ಬರುತ್ತಿರುತ್ತದೆ. ಡಿ.ವಿ.ಜಿ. ಅವರದು ಬಹುಮುಖ ವ್ಯಕ್ತಿತ್ವ. ದಾರ್ಶನಿಕ ಡಿ.ವಿ.ಜಿ. ಕನ್ನಡದ ಅತ್ಯಂತ ಹೆಚ್ಚು ಉಲ್ಲೇಖಿತ ಮಂಕುತಿಮ್ಮನ ಕಗ್ಗವಲ್ಲದೆ ಶ್ರೀಮದ್ಭಗವದ್ಗೀತಾತಾತ್ಪರ್ಯ, ಪುರುಷಸೂಕ್ತ - ದೇವರು, ಬಾಳಿಗೊಂದು ನಂಬಿಕೆ, ಜೀವನ ಸೌಂದರ್ಯ ಮತ್ತು ಸಾಹಿತ್ಯ, ಸಂಸ್ಕೃತಿ - ಕಾವ್ಯಸ್ವಾರಸ್ಯ ಮೊದಲಾದ ಮಹತ್ವದ ಕೃತಿಗಳನ್ನು ಬರೆದಿದ್ದಾರೆ. ಡಿ.ವಿ.ಜಿ. ರಾಜ್ಯಶಾಸ್ತ್ರದಲ್ಲಿಯೂ ಹಲವು ಉದ್ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮೊದಲ ಪಂಕ್ತಿಯಲ್ಲಿರುವ ಡಿ.ವಿ.ಜಿ. ಕವಿ (ಅನ್ತಃಪುರ ಗೀತೆ, ನಿವೇದನ, ಉಮರನ ಒಸಗೆ, ಶ್ರೀರಾಮಪರೀಕ್ಷಣಂ ಇತ್ಯಾದಿ), ನಾಟಕಕಾರ (ಕನ್ನಡ ಮ್ಯಾಕ್‌ಬೆತ್, ವಿದ್ಯಾರಣ್ಯ ವಿಜಯ ಇತ್ಯಾದಿ) ವಿಮರ್ಶಕ ಮತ್ತು ಜೀವನಚಿತ್ರಕಾರ.

ಇಷ್ಟೇ ಮುಖ್ಯವಾಗಿ ಡಿ.ವಿ.ಜಿ. ಪತ್ರಕರ್ತರಾಗಿದ್ದವರು, ಸಾರ್ವಜನಿಕ ಜೀವನದಲ್ಲಿ ಅಪಾರ ಆಸ್ಥೆ ಹೊಂದಿದ್ದವರು. ಅವರಿಗೆ ಸಂಸ್ಥಾನದ ದಿವಾನರಿಂದ ತೀರಾ ಸಾಮಾನ್ಯರವರೆಗೂ ಎಲ್ಲಾ ವರ್ಗದ ಜನರ ನಿಕಟ ಪರಿಚಯವಿತ್ತು. ಡಿ.ವಿ.ಜಿ. ತಮ್ಮ ಜ್ಞಾಪಕ ಚಿತ್ರಶಾಲೆ ಎಂಟು ಸಂಪುಟಗಳ ಕೃತಿಯಲ್ಲಿ ತಾವು ಕಂಡ ಹಲವು ಸಾವಿರ ವ್ಯಕ್ತಿಗಳನ್ನು ಘಟನೆಗಳನ್ನು ಜ್ಞಾಪಿಸಿಕೊಂಡಿದ್ದಾರೆ. ಈ ಸಂಪುಟಗಳು ಡಿ.ವಿ.ಜಿ. ಮತ್ತು ಅವರ ತಲೆಮಾರಿನವರ ಜೀವನದರ್ಶನವನ್ನೂ ತೆರೆದಿಡುತ್ತವೆ.

ಈ ಜೀವನ ಶೈಲಿಯಲ್ಲಿ ರಸಿಕತೆಗೆ ಹಾಸ್ಯಕ್ಕೆ ಮುಖ್ಯ ಸ್ಥಾನವಿತ್ತು. ಇಲ್ಲಿನ ಹಾಸ್ಯ ಸಾಮಾನ್ಯ ವ್ಯಕ್ತಿಗಳ ಸಾಮಾನ್ಯ ಘಟನೆಗಳಲ್ಲಿ ಕಾಣಿಸುವಂತಹದು. ಈ ಹಾಸ್ಯ ತೀರಾ ಸ್ವಾಭಾವಿಕವಾಗಿ ಬರುತ್ತದೆ. ಇದು ಶುದ್ಧಹಾಸ್ಯ ಇಲ್ಲಿ ಪ್ರೀತಿಯಿದೆ ಗೌರವವಿದೆ. ಆದರೆ ಕೊಂಕಿಲ್ಲ ಕೋಪವಿಲ್ಲ.

ಜ್ಞಾಪಕ ಚಿತ್ರಶಾಲೆ ಸರಣಿಯ ಕೊನೆಯ ಸಂಕೀರ್ಣ ತಿ ಸಂಪುಟದ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ. ಇದು ಡಿ.ವಿ.ಜಿ. ಅವರ ಹಾಸ್ಯದತ್ತ ಒಂದು ಇಣುಕುನೋಟ ಮಾತ್ರ. ಅವರ ಹಾಸ್ಯದ ವಿಸ್ತಾರವನ್ನೂ ವೈವಿಧ್ಯವನ್ನೂ ಕೆಲವೇ ಪುಟಗಳಲ್ಲಿ ಪೂರ್ತಿಯಾಗಿ ಪ್ರತಿನಿಧಿಸುವುದು ಅಸಾಧ್ಯ. ಅತ್ಯಂತ ಗಾಢಾರ್ಥಗಳಿರುವ ಕಗ್ಗಗಳನ್ನು ಬರೆದ ಡಿ.ವಿ.ಜಿ. ಇಲ್ಲಿರುವ ತುಂಟ ಪದ್ಯಗಳನ್ನೂ ಬರೆದಿದ್ದಾರೆ ಎನ್ನುವುದನ್ನು ಗಮನಿಸಬೇಕು. ಕೊನೆಯಲ್ಲಿ ಒಂದು ಎಚ್ಚರಿಕೆ - ಶೇಷಾದ್ರಿ ಅಯ್ಯರ್ ಅವರ ಅಜೀರ್ಣದ ಚಿಕಿತ್ಸಾ ವಿಧಾನಗಳು ಅವರಂತಹ ಎಕ್ಸ್‌ಪರ್ಟ್‌ಗಳಿಗೆ ಮಾತ್ರ, ಬೇರೆಯವರು ಅನುಕರಿಸಲು ಹೋಗಬಾರದು!

ಸ್ಮೃತಿ ಸಂಪುಟದಿಂದ

– ಡಿ.ವಿ.ಜಿ.

ನನ್ನ ಮುತ್ತಜ್ಜಂದಿರು ಶೇಕದಾರ್ ಗುಂಡಪ್ಪನವರು. ಅವರಿಗೆ ಪಾಂಡಿತ್ಯಕ್ಕಿಂತ ಕಾರ್ಯಸಾಮರ್ಥ್ಯ ಮುಖ್ಯವಾಗಿತ್ತೆಂದು ತೋರುತ್ತದೆ. ಅದು ಬ್ರಿಟೀಷ್ ಕಮೀಷನ್ನಿನ ಕಾಲ. ಆಗ ಗುಂಡಪ್ಪನವರು ಮುಳಬಾಗಲಿಗೆ ಶೇಕದಾರ್ ಹುದ್ದೆಗೆ ಬಂದರು. ಬ್ರಿಟೀಷರ ದಂಡು ಬೆಂಗಳೂರಿನಲ್ಲಿ ನೆಲಸಿತ್ತು. ತಿಂಗಳಿಗೊಂದು ಸಾರಿ ಈ ದಂಡು ಮದರಾಸಿಗೆ ಹೋಗತಕ್ಕದ್ದು. ಪ್ರತಿಯಾಗಿ ಮದರಾಸಿನಿಂದ ಒಂದು ದಂಡು ಬೆಂಗಳೂರಿಗೆ ಬರತಕ್ಕದ್ದು ಎನ್ನುವ ಏರ್ಪಾಡಿತ್ತು. ದಂಡಿನ ಸಂಚಾರ ಕಾಲುನಡಿಗೆಯಿಂದ ದಾರಿಯಲ್ಲಿ ಸೈನ್ಯ ಒಂದೆರಡು ದಿನ ತಂಗುವುದಕ್ಕೆ 2-3 ಕಡೆ ಏರ್ಪಾಟಿತ್ತು. ಅಂಥ ಮೊಕ್ಕಾಂ ಜಾಗಗಳಲ್ಲಿ ಮುಳಬಾಗಲೂ ಒಂದು.

ಸೈನ್ಯದ ಮೊಕ್ಕಾಂ ಎಂದರೆ ತೀನಿಯ ಏರ್ಪಾಟು ಮುಖ್ಯವಾದದ್ದು. ಊರಿನಿಂದ ಎರಡು ಮೈಲಿ ದೂರದ ಮೈದಾನದಲ್ಲಿ ಸೈನ್ಯದ ಬಿಡಾರ. ಆ ಬಿಡಾರಕ್ಕೆ ತೀನಿ ಪಾನಕಗಳನ್ನು ಒದಗಿಸುವ ಕೆಲಸ ಶೇಕದಾರ್ ಗುಂಡಪ್ಪನವರ ಪಾಲಿಗೆ ಬಂದಿತ್ತು. ಎಂದರೆ ಕುರಿ-ಕೋಳಿ, ಹಾಲು-ಮೊಸರು, ರವೆ-ಸಕ್ಕರೆ ಇವುಗಳನ್ನು ಸರಬರಾಜು ಮಾಡಲು ಕಂಟ್ರಾಕ್ಟದಾರರನ್ನು ನಿಯಮಿಸಿ ಅವರಿಂದ ಸರಬರಾಜು ನಡೆಯುವಂತೆ ನೋಡುವ ಜವಾಬ್ದಾರಿ ಗುಂಡಪ್ಪನವರಿಗೆ ಬಂದಿತ್ತು.

ಗುಂಡಪ್ಪನವರು ಬೆಳಿಗ್ಗೆ ಸ್ನಾನಾಹ್ನಿಕವನ್ನು ಮುಗಿಸಿ ಒಂದು ಜುಬ್ಬಾ ಧರಿಸಿ ಒಂದು ಅಂಗವಸ್ತ್ರವನ್ನು ಕೊರಳಸುತ್ತ ಹಾಕಿಕೊಂಡು ಪೇಟೆಗೆ ಬರುವರು. ನಡುಪೇಟೆಯಲ್ಲಿ ನಿಂತು ಅಲ್ಲಿಯೆ ವರ್ತಕರನ್ನು ಗಟ್ಟಿಯಾಗಿ ಕೂಗುವರು - ಏಕವಚನದಲ್ಲಿ, ತೆಲುಗಿನಲ್ಲಿ:

'ಸಂಜೀವಾ ತುಪ್ಪ ಇದೆಯೇನೋ?'

'ಇದೆ ಸ್ವಾಮಿ'

'ತೆಗೆದುಕೊಂಡು ಬಾ ಎಷ್ಟು ದಿವಸದ್ದೋ, ವಾಸನೆ ಹಿಡಿದಿರಬೇಕು. ನಿನ್ನ ವಾಸನೆಗೆ ಬೆಂಕಿಯಿಟ್ಟರು.'

'ಇಲ್ಲ ಸ್ವಾಮಿ ಹೊಸದು' ಎಂದು ಹೇಳುತ್ತಾ ಒಂದು ಮಡಕೆಯಲ್ಲಿ ತಂದಿರಿಸುವನು. ಅದರ ಜೊತೆಗೆ ಒಂದು ದೊಡ್ಡ ಬೆಲ್ಲದ ಮುದ್ದೆ ತರಿಸುವರು. ಗುಂಡಪ್ಪನವರು ತಮ್ಮ ಕೈಮುಷ್ಟಿಯನ್ನು ಮೇಲಕ್ಕೆತ್ತಿ ಮುದ್ದೆಯ ಮೇಲೆ ಬಡಿಯುವರು. ಅದು ನಾಲ್ಕೈದು ಹೋಳಾಗುವುದು. ಒಂದು ಹೋಳನ್ನು ಎರಡು ಬೆಟ್ಟಿನಲ್ಲಿ ಹಿಡಿದು ತುಪ್ಪದ ಗಡಿಗೆಯಲ್ಲದ್ದಿ ಅನಾಮತ್ತಾಗಿ ತಮ್ಮ ಬಾಯೊಳಗೆ ಇಳಿಬಿಡುವರು. ಅದು ಚೆನ್ನಾಗಿತ್ತೆಂದರೆ ಅವನಿಗೆ ಕಂಟ್ರಾಕ್ಟ್.

ಅಲ್ಲಿಂದ ಇನ್ನೊಂದು ಅಂಗಡಿಗೆ ಹೋಗುವಪು. ಅಲ್ಲಿಯ ರಂಗಯ್ಯಶೆಟ್ಟಿ ಒಂದು ತವಾ ಬಾಂಡ್ಲಿಯಲ್ಲಿ ಅಚ್ಚೇರಿನಷ್ಟು ರವೆ ತಂಡಿಡುವನು. ಅವರು ರವೆಯನ್ನು ಹೀಗೂ ಹಾಗೂ ತಿರುಗಿಸಿ ನೋಡಿ ತುಪ್ಪ ತರಲು ಹೇಳುವರು. ರಂಗಯ್ಯ ಶೆಟ್ಟಿ ತುಪ್ಪದ ಗಡಿಗೆ ತಂದಿಟ್ಟಾಗ ಗುಂಡಪ್ಪನವರು ಗಡಿಗೆಯೊಳಗೆ ಕೈಹಾಕಿ ಒಂದು ದೊಡ್ಡ ಬೊಗಸೆ ತುಪ್ಪವನ್ನೆತ್ತಿ ರವೆಯೊಳಗೆ ಹಾಕಿ ಕಲಸಿ ಆ ಹಸಿರವೆಯನ್ನು ಉಂಡೆಮಾಡಿ ಬಾಯೊಳಕ್ಕೆ ಬಿಟ್ಟುಕೊಳ್ಳುವರು.

ಈ ವಿಷಯವನ್ನು ತಿಳಿಸಿದವರನ್ನು ನಾನು 'ಹಸಿರವೆ ಎಲ್ಲಾದರೂ ತಿನ್ನುತ್ತಾರೆಯೇ' ಎಂದು ಕೇಳಿದ್ದಕ್ಕೆ ಅವರು 'ನಾನು ಸುಳ್ಳು ಹೇಳುತ್ತೇನೆಯೇ? ಹಾಗಿದ್ದ ನಿಮ್ಮ ಮುತ್ತಾತ. ಭೀಮಸೇನನ ಹೊಟ್ಟೆಯಲ್ಲಿ ಎಲ್ಲಾ ಅರಗಿಹೋಗುತ್ತದೆ' ಎಂದರು.

★★★

ಗುಂಡಪ್ಪನವರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಒಬ್ಬ ಮಹಾರಾಷ್ಟ್ರ ಮನುಷ್ಯನನ್ನು ಗೊತ್ತುಮಾಡಿದ್ದರು. ಆ ಕಾಲದಲ್ಲಿ ಮರಾಠಿ ಪಾರ್ಸಿ ಭಾಷೆಗಳು ಸರ್ಕಾರದ ಕಚೇರಿಗಳಲ್ಲಿ ಕೊಂಚ ಮಟ್ಟಿಗೆ ರೂಢಿಯಾಗಿದ್ದವು. ಈ ಉಪಾಧ್ಯಾಯ ಪಂತೋಜಿ, ಕನ್ನಡ, ಮರಾಠಿ, ಪಾರ್ಸಿ- ಈ ಮೂರು ಭಾಷೆಗಳನ್ನೂ, ಕೊಂಚಮಟ್ಟಿಗೆ ಲೆಕ್ಕಾಚಾರವನ್ನು ಕಲಿಸಬಲ್ಲವನಾಗಿದ್ದ. ಈತ ಕೊಂಚ ಮುದುಕ, ಕೋಪಿಷ್ಟ. ಯಾವುದೋ ಒಂದು ಸಣ್ಣ ಉದ್ಯೋಗದಲ್ಲಿದ್ದು ನಿವೃತ್ತನಾಗಿದ್ದವನು. ಈ ತುಂಟ ಹುಡುಗರಂತೂ ಆತನ ಪಾಠದಲ್ಲಿ ಹೆಚ್ಚು ಸ್ವಾರಸ್ಯ ಕಂಡಿರಲಿಲ್ಲ. ತಂದೆಯ ಹೆದರಿಕೆಯಿಂದ ಆತನ ಮುಂದೆ ಕೂಡುತ್ತಿದ್ದರೇ ಹೊರತು ತಮ್ಮ ವಿದ್ಯಾ ಕುತೂಹಲದಿಂದಲ್ಲ.

ಹೀಗಿರಲಾಗಿ ಒಂದು ದಿನ ಪಂತೋಜಿ ಪಾಠ ಹೇಳುವುದಕ್ಕೆ ಬಂದಿದ್ದಾನೆ. ಆ ಹೊತ್ತು ದ್ವಾದಶಿ; ಆತ ಬೇಗ ಊಟ ಮುಗಿಸಿಕೊಂಡು ಬಂದಿದ್ದ. ಮರದ ನೆರಳು ಚೆನ್ನಾಗಿರುತ್ತದೆಂದು ಹೇಳಿ ಹುಣಸೆ ಮರಗಳ ಕೆಳಗೆ ಚಾಪೆ ಹಾಸಿ ಕುಳಿತುಕೊಂಡಿದ್ದಾನೆ. ಮೂವರು ಹುಡುಗರಿಗೂ ಬರಹವನ್ನೂ, ಲೆಕ್ಕವನ್ನೂ ನಿಯಮಿಸಿದ್ದಾನೆ. ಅವರ ಕಣ್ಣು ಹಲಗೆ ಪುಸ್ತಕಗಳ ಮೇಲಿಲ್ಲದೆ ಪಂತೋಜಿಯ ಮೇಲೆಯೇ ಇದೆ. ಕೆಲವು ನಿಮಿಷಗಳಾದ ಮೇಲೆ ಪಂತೋಜಿ ತೂಕಡಿಸುತ್ತಿದ್ದ ಹಾಗೆ ಅವರಿಗೆ ತೋರಿತು. ಅವರು ಗುರುಪ್ರೇಮದಿಂದ ಪಂತೋಜಿಯವರನ್ನು ಹಾಗೆಯೇ ಮಲಗ ಹೇಳಿದರು. 'ನಮ್ಮ ಲೆಕ್ಕ ಬರವಣಿಗೆ ಮುಗಿಯುವವರೆಗೂ ನೀವು ಮಲಗಿಕೊಂಡಿರಿ, ನಾವು ಇದನ್ನು ಬೇಗ ಬೇಗ ಮಾಡಿ ತೋರಿಸುತ್ತೇವೆ' ಎಂದು ಭರವಸೆ ಹೇಳಿದರು. ಪಂತೋಜಿಯ ಕಿವಿಗೆ ಅದು ಹಿತವೆನಿಸಿತು. ಮುದುಕ ಅಲ್ಲಿಯೇ ಮಲಗಿದ. ಬೇಗ ನಿದ್ದೆ ಆವರಿಸಿತು.

ಆಗ ಶೇಷಗಿರಿ ಮೊದಲು ಎದ್ದು ಮರದ ಮೇಲೆ ಹತ್ತಿದ. ಹತ್ತಿ ಒಂದು ಕೊಂಬೆಯನ್ನು ಹಿಡಿದ. ರಾಮಣ್ಣ ಅವನ ಹಿಂದೆ, ಸೀನಣ್ಣ ಅವನ ಹಿಂದೆ- ಹೀಗೆ ಕೊಂಬೆ ನೆಲಕ್ಕೆ ಬಗ್ಗಿತು.

ಶೇಷಣ್ಣ ಕೊಂಬೆಯ ಕೊನೆಗೆ ಒಂದು ಹುರಿಯನ್ನು ಕಟ್ಟಿ ಹುರಿಯ ಇನ್ನೊಂದು ಕೊನೆಯನ್ನು ಪಂತೋಜಿಯ ಶಿಖೆಗೆ ಚೆನ್ನಾಗಿ ಬಿಗಿದ. ಮೆಲ್ಲಮೆಲ್ಲನೆ ಮೂವರೂ ಹಿಂದಕ್ಕೆ ಸರಿದರು. ಕೊಂಬೆ ಛಂಗನೆ ಮೇಲಕ್ಕೆಗರಿತು. ಪಂತೋಜಿಯೂ ಅದರೊಡನೆ ಮೇಲಕ್ಕೊಯ್ಯಲ್ಪಟ್ಟು, ಅಲ್ಲಿಂದ ನೇತಾಡುತ್ತಾ ನೋವಿನಿಂದಲೂ ಭಯದಿಂದಲೂ ಅರಚಿಕೊಂಡ. ಬೀದಿಯಲ್ಲಿ ಹೋಗುತ್ತಿದ್ದ ಜನ ಅವನನ್ನು ಆ ಆಪತ್ತಿನಿಂದ ಪಾರು ಮಾಡಿದರು.

ಇದನ್ನು ನೋಡಿದ ತಾಯಿ ಕಾಮಾಕ್ಷಮ್ಮ ಪಂತೋಜಿಯವರ ಮನೆಗೆ ಹೋಗಿ ತಮ್ಮ ವಿಷಾದವನ್ನೂ ನಾಚಿಕೆಯನ್ನೂ ಹೇಳಿಕೊಂಡು ಆತನಿಗೆ ಒಂದಿಷ್ಟು ಹಣ್ಣು ಹಂಪಲು ಮೊದಲಾದ ಮರ್ಯಾದೆಗಳನ್ನು ಸಮರ್ಪಿಸಿ ಕ್ಷಮೆ ಪಡೆದು ಬಂದಿದ್ದರು.

★★★

ನಾನು ಕೋಲಾರದಲ್ಲಿ 1903 ರಲ್ಲಿ ಫಿಫ್ತ್ ಫಾರಂಗೆ ಸೇರಿದೆ. ಆಗ ನನಗೆ ಉಪಾಧ್ಯಾಯರಾಗಿದ್ದ ಕೆಲವರನ್ನು ಭಕ್ತಿ ಕೃತಜ್ಞತೆಯಿಂದ ನೆನೆಯಬೇಕು. ಅವರಲ್ಲಿ ಮೊದಲನೆಯವರು ಕನ್ನಡ ಪಂಡಿತ ಹನುಮಂತರಾಯರು. ಇವರ ಪಾಠಕ್ರಮದ ಸ್ವಾರಸ್ಯ ಹೆಚ್ಚಿನದೋ ಸ್ವಭಾವದ ಸೌಜನ್ಯತೆ ಹೆಚ್ಚಿನದೋ ನಾನು ನಿರ್ಣಯಿಸಲಾರೆ. ಒಂದು ಸಾರಿ ಛಂದಸ್ಸಿನ ಪಾಠದ ನಡುವೆ ನಾನು ಅವರನ್ನು 'ಕಂದ ರಚನೆ ಹೇಗೆ?' ಎಂದು ಕೇಳಿದೆ. ಅವರು 'ತಾನೇ ತಿಳಿಯಬೇಕಪ್ಪ' ಎಂದರು. ನಾನು 'ಸ್ವಲ್ಪ ಹೇಳಿಕೊಡಬೇಕಲ್ಲ ಸಾರ್' ಎಂದೆ. ಅವರು 'ಹೇಳಿದೆನಲ್ಲಪ್ಪ, ತಾನೇ ತಿಳಿದು ಬರುತ್ತದೆಂದು. ಸ್ವಲ್ಪ ವಯಸ್ಸಾಗಿ ಅನುಭವವಾಗಬೇಕು' ಎಂದರು. ಕ್ಲಾಸಿನಲ್ಲಿ ಎಲ್ಲರೂ ನಕ್ಕರು. ನನಗೆ ನಾಚಿಕೆಯಾಗಿರಬೇಕು. ನನಗೆ ಒಂದಾನೊಂದು ಕಾಲದಲ್ಲಿ ನಾಚಿಕೆಯಿತ್ತು.

ಕೋಲಾರದಲ್ಲಿ ಓದುತ್ತಿದ್ದಾಗಲೇ ವಿದ್ಯಾರ್ಥಿ ಸಂಘದವರು ಒಂದು ಪ್ರಬಂಧ ಲೇಖನ ಸ್ಪರ್ಧೆಯನ್ನೇರ್ಪಡಿಸಿದ್ದರು. ವಿಷಯ ವಿದ್ಯಾಭ್ಯಾಸ. ಸ್ಪರ್ಧೆಯಲ್ಲಿ ನಾನೂ ಸೇರಿದ್ದೆ. ನನ್ನ ಪ್ರಬಂಧದ ಮೊದಲ ವಾಕ್ಯವನ್ನು ಸಯನ್ಸ್ ಮೇಷ್ಟರು ಸುಬ್ಬರಾಯರು ಗಟ್ಟಿಯಾಗಿ ಓದಿದರು, ಹೀಗೆ: 'ವಿದ್ಯೆ ಎರಡು ವಿಧ: ಸುವಿದ್ಯೆ, ದುರ್ವಿದ್ಯೆ.' ಸುಬ್ಬರಾಯರು ಅಷ್ಟಕ್ಕೇ ನಿಲ್ಲಿಸಿ 'ಸುವಿದ್ಯೆ ಎಲ್ಲಿದೆಯೋ ನಿನಗೆ ತಿಳಿಯದು. ದುರ್ವಿದ್ಯೆ ನಿನಗೆ ತಿಳಿದ ಹಾಗೆ ಬೇರೆ ಯಾರಿಗೂ ತಿಳಿಯದು' ಎಂದರು. ನನ್ನ ಸ್ನೇಹಿತರಿಗಾದ ಸಂತೋಷವನ್ನು ವಾಚಕರೇ ಊಹಿಸಬಹುದು.

★★★

ಕೆಲವು ವರ್ಷಗಳ ಹಿಂದೆ ವಿಧಿರಾಯ ನನಗೆ ಹೇಳಿ ಕಳುಹಿಸಿದ. ವಿಧಿರಾಯನ ಆಸ್ಥಾನ. ವಿಧಿ ಸಿಂಹಾಸನದ ಮೇಲೆ ಕುಳಿತಿದ್ದಾನೆ. ರೋಷಾವಿಷ್ಟನಾಗಿದ್ದಾನೆ.

ವಿಧಿ: ಏನಯ್ಯ ಇದು ನಿನ್ನ ಪುಂಡಾಟ.

ನಾನು: ಅಂಥದೇನೂ ಇಲ್ಲವಲ್ಲ.

ವಿಧಿ: ಇಲ್ಲವೇ ಇದೇನು ಅಪಪ್ರಲಾಪ?

ಸೊಗಸಾದ ಮೂಗಿಟ್ಟು / ನಗಡಿಯದರೊಳಗಿಟ್ಟು // ಅಗಟವಿಗಟವ ಮಾಡಿದ ಬ್ರಹ್ಮನ / ಜಿಗುಟು ಕುಂಡೆಯಲಿ ಮರ್ಮಜ್ಞ.

ಅಶ್ಲೀಲವಲ್ಲವೋ ಇದು?

ನಾನು: ಅಶ್ಲೀಲವೇನು ಸ್ವಾಮಿ? ಅಸತ್ಯವಲ್ಲ. ನನ್ನ ಅನುಭವದ ಮಾತು.

ವಿಧಿ: ಸರಿ, ಸರಿ. ನಿನಗೇನೂ ಪಾಪ ಪರಸೆಯಿಲ್ಲ. ಇದೇನು ನಿನ್ನ ಕುಚೋದ್ಯ? (ನಗುತ್ತಾ)

ಕೇಶ ಹೆಣ್ತಲೆಗೆ ಸಿರಿ / ಮೀಶೆ ಗಣ್ಮುಟಿಕೆ ಸಿರಿ // ನಾಸ ತೊಡೆ ಕಂಕುಳಿಗೆ/ ಲೇಸಾರ್ಗೆ ಬೊಜ್ಜು ಮರ್ಮಜ್ಞ.

ಇದೇನು ಅಪಸ್ಮಾರವಯ್ಯ? ಇಂಥಾದ್ದನ್ನು ಸಭ್ಯರು ಬರೆದರಾರೇನಯ್ಯ?

ಜಲಕೊಂದು ದಾರಿ ಸರಿ/ಮಲಕೊಂದು ದಾರಿ ಸರಿ // ಕುಲವೃದ್ಧಿಯಮೃತ ಪ್ರವಾಹಕ್ಕೆ ಆ / ಕೊಳೆದಾರಿ ಸರಿಯೆ ಮರ್ಮಜ್ಞ.

★★★

ಮುಂದಿನ ಫಾರ್ಮಕೋಪಿಯ - ಎಂದರೆ ಚಿಕಿತ್ಸಾ ಸಂಗ್ರಹ ಗ್ರಂಥಗಳನ್ನು ಬರೆಯುವವರಿಗೆ ಸಹಾಯವಾಗಲಿ ಎಂಬ ದೃಷ್ಟಿಯಿಂದ ನನಗೆ ತಿಳಿದ ಕೆಲವು 'ಕೇಸ್ ಹಿಸ್ಟರಿ'ಗಳನ್ನು ದಾಖಲೆ ಮಾಡುವುದು ಇಲ್ಲಿ ನನ್ನ ಉದ್ದೇಶ. ಸದ್ಯಕ್ಕೆ ಎರಡು ಕಾಯಿಲೆಗಳನ್ನು ಪ್ರಸ್ತಾಪಿಸುತ್ತಿದ್ದೇನೆ - ಒಂದು ಅಜೀರ್ಣ ಇನ್ನೊಂದು ಹಸಿವು.

ಮೈಸೂರಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್‌ರವರು ಒಳ್ಳೆಯ ಊಟಗಾರರು. ಪ್ರತಿದಿವಸ ಅವರ ಭೋಜನದಲ್ಲಿ ತರಕಾರಿಗಳೂ, ಭಕ್ಷ್ಯಭೋಜ್ಯಗಳು ನಾಲ್ಕಾರು ಬಗೆಯವು ಇರುತ್ತಿದ್ದವಂತೆ. ಆರು ತಿಂಗಳಿಗೆ ಒಂದು ಸಾರಿಯೋ ಇನ್ನೆಂದೋ ಅವರಿಗೆ ಅಜೀರ್ಣದ ಶಂಕೆಯುಂಟಾದರೆ ಆಗ ಅವರು ಮಾಡಿಕೊಳ್ಳುತ್ತಿದ್ದ ಔಷಧದ ರೀತಿ ಹೀಗೆ: ಸೊಗಸಾದ ಚಿರೋಟಿ ಮಾಡಿಸುವುದು. ಒಂದಡಿ ಮಧ್ಯರೇಖೆಯುಳ್ಳ ದೊಡ್ಡ ಬೆಳ್ಳಿಯ ಡಬರಿಯಲ್ಲಿ ಅಂಗೈ ದಪ್ಪ ಸಕ್ಕರೆ ಹರಡಿಸುವುದು. ಅದರ ಮೇಲೊಂದು ಚಿರೋಟಿ. ಮತ್ತೊಂದು ಪದರ ಸಕ್ಕರೆ. ಇನ್ನೊಂದು ಚಿರೋಟಿ ಮತ್ತೆ ಸಕ್ಕರೆ. ಹೀಗೆ ಮೂರು ಪದರವಾದ ಬಳಿಕ ಒಂದು ಹಿಡಿ ಮೆಗ್ನೀಸಿಯಂ ಸಲ್ಫೇಟ್ ಎಂಬ ಭೇದಿಯುಪ್ಪು. ಮತ್ತೆ ಅದರ ಮೇಲೆ ಚಿರೋಟಿ ಸಕ್ಕರೆ ಪದರಗಳು - ಡಬರಿ ಭರ್ತಿಯಾಗುವಂತೆ.

ಅಷ್ಟರ ಮೇಲೆ ಬಿಸಿಬಿಸಿ ಕಾಯಿಸಿದ ಹಾಲು ಸುರಿಯುವುದಂತೆ. ಹಾಲು ಸುರಿಯುತ್ತಿದ್ದರೆ ಫೋರ್ಕ್ - ಮುಳ್ಳು ಚಮಚಗಳನ್ನು ಇಬ್ಬರು ಹಿಡಿದುಕೊಂಡು ಮೇಲಿನಿಂದ ಕೆಳಗಿನವರೆಗೂ ತಿವಿದು ತಿರುವಿ ಹಾಕುವುದು. ಹೀಗೆ ಈ ಭಕ್ಷ್ಯ ಮೆತ್ತಗಾಗಿ ಅರ್ಧಪಾನಕ ಸ್ಥಿತಿಗೆ ಬಂದಾಗ ಅಯ್ಯರವರು ಅಷ್ಟನ್ನು ಸೇವಿಸಿದ ಬಳಿಕ ಆ ಹೊತ್ತು ಉಪವಾಸವಿರುವುದು. ಮಾರನೆಯ ದಿನದಿಂದ ಯಥಾಪ್ರಕಾರ.

ರಾಜಾ ಸರ್ ಟಿ. ಮಾಧವರಾಯರ ತಿಂಡಿಪೋತತನ ಇದಕ್ಕಿಂತ ಪ್ರಸಿದ್ಧವಾದದ್ದು. ಅವರ ಆಫೀಸ್ ಕೋಣೆಗೆ ಸೇರಿಕೊಂಡಂತಿದ್ದ ಹಿಂಭಾಗದ ಕೋಣೆಯಲ್ಲಿ ನಾಲ್ಕೈದು ಕುಂಪಟಿಗಳಲ್ಲಿ ಬೆಂಕಿಯನ್ನು ಸಿದ್ಧಮಾಡಿಕೊಂಡು ಅಡಿಗೆಯವರಿರುತ್ತಿದ್ದರು. ಸುತ್ತಲೂ ಮಂಚಿಕೆಗಳ ಮೇಲೆ ಬಾಂಡಲೆಗಳು ವಿಧವಿಧವಾದ ಚಕ್ಕಲಿ, ಲಾಡು ಮೊದಲಾದ ಕಲಿಸಿದ ಹಿಟ್ಟುಗಳು.

ಮಾಧವರಾಯರು ಆಫೀಸ್ ರೂಮಿನಲ್ಲಿ ಕುಳಿತು ತಾವೇ ಏನೋ ಬರೆಯುತ್ತಿರುವರು ಅಥವಾ ತಾವು ಹೇಳಿ ಗುಮಾಸ್ತನ ಕೈಯಿಂದ ಬರೆಯಿಸುತ್ತಿರುವರು. ಪಕ್ಕದ ಕೋಣೆಯಿಂದ ಅವರಿಗೆ ತಿಂಡಿ ತಂದುಕೊಡುತ್ತಿರುವರು. ಮಸಾಲಾ ಅಡಿಗೆಯವರು ದೋಸೆ ತಂದುಕೊಟ್ಟರು ಎಂದಿಟ್ಟುಕೊಳ್ಳೋಣ. ಮಾಧವರಾಯರು ಒಂದು ಚೂರನ್ನು ಬಾಯಿಗೆ ಹಾಕಿಕೊಂಡೋ ಹಾಕಿಕೊಳ್ಳುವುದಕ್ಕೆ ಮುಂಚೆಯೇ: 'ಏನೋ ಪಕೋಡವಿಲ್ಲವೇನು?' ಎನ್ನುವರು. ಮರುಕ್ಷಣದಲ್ಲಿಯೇ ಬಿಸಿಬಿಸಿ ಪಕೋಡ ಅವರ ಮುಂದೆ ಬರುವುದು. ಆಮೇಲೆ: 'ಎಷ್ಟು ದಿನವಾಯಿತೋ ಫೀವರ್ ತಿಂದು?' ಎನ್ನುವರು. ಉತ್ತರ - ಕ್ಷಣದಲ್ಲಿಯೇ ಫೀವರ್ ಸಿದ್ಧ. ಅವರು ಕೇಳಿದ ತಿಂಡಿ ತತ್‌ಕ್ಷಣ ಬಾರದಿದ್ದರೆ ಅಡಿಗೆಯವನಿಗೆ ಎತ್ತಂಗಡಿ.

ಹೀಗೆ ಅವರು ಮನೆಯಲ್ಲಿದ್ದಷ್ಟು ಹೊತ್ತೂ ಏನಾದರೊಂದು ತಿನ್ನುತ್ತಲೇ ಇದ್ದರಂತೆ. ಅವರು ಹಾಗೆ ತಿನ್ನುತ್ತಿದ್ದದ್ದರಿಂದಲೇ ಅವರಿಗೆ ಅಂಥ ಅದ್ಭುತವಾದ ಮೇಧಾಶಕ್ತಿ ಎಂದು ಕೆಲ ಮಂದಿಯ ವಾದ.

ಸರ್ ಎ. ಶೇಷಯ್ಯಶಾಸ್ತ್ರಿಗಳವರೂ ಭೋಜನಕ್ಕೆ ಎತ್ತಿದ ಕೈ. ಇವರು ಪುದುಕೋಟೆ ಸಂಸ್ಥಾನದ ದಿವಾನರಾಗಿದ್ದು ಹೆಸರುವಾಸಿಯಾಗಿದ್ದರು. ಮಹಾ ಮೇಧಾವಿಗಳು, ಒಳ್ಳೆಯ ಸಂಸ್ಕೃತ ವಿದ್ವಾಂಸರು. ಇವರ ಮೈ ಬಹು ಸ್ಥೂಲ- ಏಳುವುದು, ಕೂಡುವುದು, ಓಡಾಡುವುದು ಬಹುಶ್ರಮ. ಅವರು ಭೋಜನಕ್ಕೆ ಮಾಡಿಕೊಂಡಿದ್ದ ಏರ್ಪಾಟು ಕೇಳಲು ಚೆನ್ನಾಗಿದೆ.

ಅವರ ಎದೆಯೆತ್ತರಕೆ ಕೋರ್ಟುಗಳಲ್ಲಿರುವಂಥ ಒಂದು ಅರ್ಧಚಂದ್ರಾಕಾರದ ಮೇಜಿನ ಮಧ್ಯದ ಬಿಡುವಿನಲ್ಲಿ ಅವರು ಪದ್ಮಾಸನ ಹಾಕಿಕೊಂಡು ನೆಲದ ಮೇಲೆ ಕೂಡುತ್ತಿದ್ದರು. ಎದೆಯ ಎತ್ತರಕ್ಕೆ ಸರಿಯಾಗಿ ಆ ಮೇಜು. ಅವರ ಬೃಹತ್ಕುಕ್ಷಿಯ ಗಾತ್ರಕ್ಕೆ ಅನುವಾಗಿ ಮೇಜಿನ ಮಧ್ಯದ ಬಿಡುತಿ. ಆ ಮೇಜಿನ ಮೇಲೆ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಬಾಳೆಯೆಲೆಗಳು. ನಾನಾ ಬಗೆಯ ಶಾಕಪಾಕ ಭಕ್ಷ್ಯಗಳು. ಅವರು ಎಲ್ಲಿ ಕೈಯಿಟ್ಟರೆ ಅಲ್ಲಿ ಒಂದು ಭಕ್ಷ್ಯ. ಬಗ್ಗಬೇಕಾದ ಪ್ರಯಾಸವಿಲ್ಲ. (ಸಾಧ್ಯವೂ ಇಲ್ಲ) ಕೈಯಿಟ್ಟಕಡೆ ಭಕ್ಷ್ಯ. ಹೀಗೆ ಸಾವಕಾಶವಾಗಿ ಭೋಜನ ಮಾಡಿದವರು ಶೇಷಯ್ಯಶಾಸ್ತ್ರಿಗಳು.

★★★

ಜನಪ್ರಿಯ ನಗೆಗಾರರು:

ಮಿಲ್ಟನ್ ಬರ್ಲ್

- ಶಿವು

ನಾನು ಮಿಲ್ಟನ್ ಬರ್ಲ್ ಅನ್ನು ಮೊದಲು ನೋಡಿದ್ದು ಬೊಂಬಾಯಿನ ಸಿನಿಮಾ ಮಂದಿರವೊಂದರಲ್ಲಿ. ಯಾವುದೋ ಇಂದು ಇಂಗ್ಲೀಷ್ ಕಾಮಿಡಿ ಅಲ್ಲಿ ಓಡುತ್ತಿತ್ತು. ಆ ಚಿತ್ರದಲ್ಲಿ, ಕೋಟ್ಯಾಧೀಶ್ವರನ ಪಾತ್ರವನ್ನು ಖ್ಯಾತ ಫ್ರೆಂಚ್ ಹಾಸ್ಯನಟ ಯಿವ್ಸ್ ಮಾಂಟಾಡ್ ನಟಿಸಿದ್ದ. ಈ ಕೋಟ್ಯಾಧೀಶ್ವರನಿಗೆ ಹೇರಳವಾಗಿ ಹಣವಿದ್ದರೂ ಅಷ್ಟರಲ್ಲಿ ತೃಪ್ತಿ ಇಲ್ಲ. ಸಭೆಗಳಿಗೆ ಹೋಗಿ ಅಲ್ಲಿನ ಜನಗಳ ಮನರಂಜಿಸಿ ನಗಿಸುವ ಗೀಳು ಅವನಿಗೆ. ಆದರೆ ಇದು ಅಷ್ಟು ಸುಲಭದ ಕೆಲಸವೇ? ಅದಕ್ಕೆ ತಯಾರಿ ಬೇಡವೇ? ಸರಿ, ತಯಾರಿಗೆ ಒಬ್ಬ ಶಿಕ್ಷಕನನ್ನು ನೇಮಿಸಿಕೊಂಡ. ಶಿಕ್ಷಕ ಬಂದು ಶ್ರೀಮಂತನಿಗೆ ಪಾಠ ಹೇಳಲು ಶುರು ಮಾಡಿದ. ''ಸಭಿಕರನ್ನು ನಗಿಸುವುದು



ಬಹುಸುಲಭ. ಮೊಟ್ಟ ಮೊದಲು, ಎರಡು ಪಾದಗಳು ಒಂದು ಎಡಕ್ಕೆ, ಒಂದು ಬಲಕ್ಕೆ ತಿರುಗಿರುವಂತೆ ನಿಂತುಕೊಳ್ಳಬೇಕು. ಹೀಗೆ ಅಡ್ಡಗಾಲಿನಲ್ಲಿ ನಿಂತು, ನಾಲಿಗೆಯನ್ನು ಮುಂದಕ್ಕೆ ಚಾಚಿ ಅಡ್ಡಡ್ಡಲಾಗಿ ನಡೆಯಲು ಪ್ರಾರಂಭಿಸಬೇಕು. ಆಗ ಸಭಿಕರು ಬಿದ್ದು ಬಿದ್ದು ನಗುತ್ತಾರೆ.''

ಕೋಟ್ಯಾಧೀಶ್ವರನಿಗೆ ಇದನ್ನು ಕೇಳಿ ಕೋಪ ಬಂತು. ''ಸರ್ಕಸ್ಸಿನ ಮೂರನೆಯ ದರ್ಜೆ ನಕಲಿ ಹಾಮರು ಮಾಡುವಂತಹ ಈ ಕಿಸುಗಾಲಿನ ನಡಿಗೆ ವಕ್ರ ಮುಖ ಚಪರೆ, ಇಂತಹ ಕೀಳು ಹಾಸ್ಯ ನನಗೆ ಬೇಡ. ಯಾವುದಾದರೂ ಅತಿ ಉತ್ತಮ ಮಟ್ಟದ, ಗಂಭೀರವಾದ ಹಾಸ್ಯ ಹೇಳಿಕೊಡು'' ಅಂತ ಅವನು ಶಿಕ್ಷಕನಿಗೆ ಆಜ್ಞಾಪಿಸಿದ.

''ಓಹೋ, ಗಂಭೀರವಾದ ಹಾಸ್ಯ ಬೇಕೇನು? ಅದಕ್ಕೇನು, ಅದನ್ನೇ ಹೇಳಿ ಕೊಡುತ್ತೇನೆ. ನೀನು ಒಂದು ಒಳ್ಳೆಯ ಸೂಟ್ ಹಾಕಿಕೊಂಡು, ಟೈ ಧರಿಸಿ, ಕೈಮೇಲೆ ಒಂದು ಓವರ್ ಕೋಟ್ ಇಟ್ಟುಕೊಂಡು, ಕೋಟಿನ ಮೇಲಿನ ಜೇಬಿನಲ್ಲಿ ಒಂದು ರೇಷಿಮೆ ಕರವಸ್ತ್ರ ಸಿಗಿಸಿಕೊಂಡು, ಅತಿ ಗಾಂಭೀರ್ಯದಿಂದ ವೇದಿಕೆಯ ಮೇಲೆ

ನಡೆದುಕೊಂಡು ಬಾ. ಮುಖದಲ್ಲಿ ರಾಜ ಕಳೆ ತೇಲುತ್ತಿರಲಿ. ಹಾಗೆ ಗಂಭೀರವಾಗಿ ನಡೆಯುತ್ತಾ, ಹಠಾತ್ತನೆ, ಕಾಲುಗಳನ್ನು ಅಗಲಿಸಿ, ನಾಲಿಗೆ ಚಾಚಿ, ಅಡ್ಡ ಗಾಲಿನಲ್ಲಿ ನಡೆಯಲು ಶುರು ಮಾಡು'' ಅಂತ ಶಿಕ್ಷಕ ಅಭಿನಯ ಸಹಿತವಾಗಿ ಮಾಡಿ ತೋರಿಸಿದಾಗ, ಮುಂದಿನ ಒಂದು ರೂಪಾಯಿ ಸಾಲುಗಳಿಂದ ಹಿಡಿದು, ಹಿಂದಿನ ಬಾಲ್ಕನಿವರೆಗೂ ಇಡೀ ಸಿನಿಮಾ ಮಂದಿರದಲ್ಲಿ ನಗೆಯ ಬುಗ್ಗೆ ಚಿಮ್ಮಿತು. ಆ ಶಿಕ್ಷಕ ಮತ್ತಾರೂ ಅಲ್ಲ - ಮಿಲ್ಟನ್ ಬರ್ಲ್.

ಮಿಲ್ಟನ್ ಬರ್ಲ್ ಅಮೆರಿಕದ ಅತ್ಯಂತ ಯಶಸ್ವಿ ಟಿ.ವಿ. ನಗೆಗಾರ. ಎರಡನೇ ಮಹಾಯುದ್ಧ ಮುಕ್ತಾಯವಾದ ಹಲವು ವರ್ಷಗಳಲ್ಲಿ, ಮಿಲ್ಟನ್‌ನ ಹಾಸ್ಯ ಕಾರ್ಯಕ್ರಮ "ಏಮೋಸ್ ಅಂಡ್ ಆಂಡಿ'' ಬಹುವಾಗಿ ಖ್ಯಾತಿಯನ್ನು ಪಡೆಯಿತು. ಪ್ರತಿ ಮಂಗಳವಾರ ಸಂಜೆ ಈ ಕಾರ್ಯಕ್ರಮವನ್ನು ನೋಡಲು ಇಡೀ ರಾಷ್ಟ್ರವೇ ಕಾದಿರುತ್ತಿತ್ತಂತೆ. ಅಮೆರಿಕದ ಟೈಂ ವಾರಪತ್ರಿಕೆ ಆ ದಿನಗಳ ವೈಖರಿಯನ್ನು ಹೀಗೆ ವರ್ಣಿಸಿತ್ತು.

"ಮಂಗಳವಾರ ಸಂಜೆ ಬಂತೆಂದರೆ, ಸಿನಿಮಾ ಮಂದಿರಗಳ ಜನಸಂದಣಿ ಯಾವುದೋ ಮಾಯದಲ್ಲಿ ಕ್ಷೀಣಿಸುತ್ತದೆ. ಅಂಗಡಿಗಳಲ್ಲಿ ವ್ಯಾಪಾರ ಕುಂದುತ್ತದೆ. ಕೆಲವು ಅಂಗಡಿಗಳಂತೂ ಮುಚ್ಚೇಬಿಡುತ್ತವೆ. ನಮ್ಮ ಶತ್ರು ರಾಷ್ಟ್ರಗಳೇನಾದರೂ ನಮ್ಮ ಮೇಲೆ ಧಾಳಿ ಮಾಡಲು ಯೋಚಿಸಿದರೆ, ಮಂಗಳವಾರ ಸಂಜೆ ಅವರಿಗೆ ಅತ್ಯಂತ ಪ್ರಶಸ್ತವಾದ ಸಮಯ.''

ಭಾನುವಾರ ಬೆಳಿಗ್ಗೆ ದೂರದರ್ಶನದಲ್ಲಿ ರಾಮಾಯಣ ಪ್ರಸಾರವಾಗುತ್ತಿದ್ದ ಕಾಲದ ಜ್ಞಾಪಕ ಬರುತ್ತೆ ಅಲ್ವೆ!

ಬರ್ಲ್‌ನ ಟಿ.ವಿ. ನಗೆ ಕಾರ್ಯಕ್ರಮ ಎಷ್ಟು ಜನಪ್ರಿಯವಾಗಿತ್ತೆಂದರೆ, ಇದನ್ನು ನೋಡುವ ಸಲುವಾಗಿಯೇ, ಜನ ಟಿ.ವಿ. ಸೆಟ್‌ಗಳನ್ನು ಕೊಂಡು, ಟಿ.ವಿ. ಸೆಟ್‌ಗಳ ಮಾರಾಟ ಒಮ್ಮೆಲೇ ಹೆಚ್ಚಾಯಿತಂತೆ. ಅಮೆರಿಕದ ಇನ್ನೊಬ್ಬ ಖ್ಯಾತ ಹಾಸ್ಯಗಾರ ಜೋ ಲೂಯಿಸ್, ಇದರ ಬಗ್ಗೆ ಹೇಳುತ್ತಾ ಶ್ರೀಯುತ ಬರ್ಲ್ ಅವರು, ಅನೇಕ ಸೆಟ್‌ಗಳ ಮಾರಾಟಕ್ಕೆ ಕಾರಣರಾಗಿದ್ದಾರೆ. ಮೊನ್ನೆ ತಾನೆ ನಾನು ನನ್ನ ಸೆಟ್ ಮಾರಿದೆ. ನನ್ನ ತಮ್ಮ ಕಳೆದವಾರ ತನ್ನ ಸೆಟ್ ಮಾರಿದ'' ಅಂತ ನಗೆ ಚಟಾಕಿ ಹಾರಿಸಿದ್ದು ಬೇರೆ ಮಾತು.

1949ರ ಮೇ 16ನೇ ತಾರೀಖು ಬರ್ಲ್‌ಗೆ ಮಹತ್ವದ ದಿನ. ಅಂದು, ಅಮೆರಿಕದ ಎರಡು ಸುಪ್ರಸಿದ್ಧ ವಾರಪತ್ರಿಕೆಗಳಾದ, ಟೈಂ ಮತ್ತು ನ್ಯೂಸ್‌ವೀಕ್‌ಗಳು. ಒಟ್ಟಿಗೆ ತಮ್ಮ ಮುಖಪುಟದಲ್ಲಿ ಬರ್ಲ್‌ನ ಚಿತ್ರನ್ನು ಪ್ರಕಟಿಸಿದ್ದವು. ಈ ರೀತಿ ಒಮ್ಮೆಲೇ ಒಂದೇ ವ್ಯಕ್ತಿಯ

ಚಿತ್ರ, ಎರಡೂ ಪತ್ರಿಕೆಗಳ ಮುಖಪುಟದಲ್ಲಿ ಕಂಡು ಬಂದದ್ದು ಚಾರಿತ್ರಿಕವಾಗಿ ಎರಡೇ ಬಾರಿ. ಒಮ್ಮೆ ವಿನ್‌ಸ್ಟನ್ ಚರ್ಚಿಲ್, ಇನ್ನೊಮ್ಮೆ ಫ್ರಾಂಕ್ಲಿನ್ ರೂಸ್‌ವೆಲ್ಟ್.

ಮಿಲ್ಟನ್ ಹುಟ್ಟಿದ್ದು 1908ನೇ ಜುಲೈ 12 ರಂದು ನ್ಯೂಯಾರ್ಕಿನಲ್ಲಿ. ತಂದೆ ಮೋಸೆಸ್ ಬರ್ಲಿಂಗರ್ ಒಬ್ಬ ಪೇಯಿಂಟ್ ವ್ಯಾಪಾರಿ. ತಾಯಿ ಸಾಂಡ್ರಾಗೆ ಒಂದು ವ್ಯಾಪಾರೀ ಮಳಿಗೆಯಲ್ಲಿ ಕೆಲಸ. ಮನ್ ಹಟ್ಟನ್‌ನ ಹೈಸ್ಕೂಲ್ ಒಂದರಲ್ಲಿ ಎಂಟನೆಯ ದರ್ಜೆಯವರೆಗೆ ಓದಿದ ಮಿಲ್ಟನ್, ಹಣದ ಮುಗ್ಗಟ್ಟಿನಿಂದ ಮುಂದೆ ಓದಲು ಸಾಧ್ಯವಾಗದೇ, ವಿದ್ಯಾಭ್ಯಾಸಕ್ಕೆ ಶರಣು ಹೊಡೆದ. ಹುಟ್ಟಿನಿಂದಲೇ ಹಾಸ್ಯ ಮನೋಭಾವ ಹೊಂದಿದ್ದ ಮಿಲ್ಟನ್‌ಬರ್ಲ್‌ಗೆ ನಲವತ್ತರ ದಶಕದಲ್ಲಿ, ಆಗತಾನೇ ಜನಪ್ರಿಯವಾಗುತ್ತಿದ್ದ ದೂರದರ್ಶನ ಮಾಧ್ಯಮ ಒಂದು ವರದಾನವಾಯಿತು. ಅಮೆರಿಕದ ಸುಪ್ರಸಿದ್ಧ ಟಿ.ವಿ. ಪ್ರಸಾರ ಸಂಸ್ಥೆಯಾದ ಎನ್.ಬಿ.ಸಿ.ಯೊಂದಿಗೆ ಕರಾರನ್ನು ಹೊಂದಿದ್ದ ಮಿಲ್ಟನ್‌ಗೆ ತನ್ನ ಹಾಸ್ಯ ಕಾರ್ಯಕ್ರಮಗಳ ರಿಹರ್ಸಲ್ ಎಂದರೆ ಎಲ್ಲಿಲ್ಲದ ಉತ್ಸಾಹ. ಸಿಗಾರ್ ಒಂದನ್ನು ಬಾಯಲ್ಲಿ ಕಚ್ಚಿಕೊಂಡು, ಕಾರ್ಯಕ್ರಮದ ನಟ, ನಟಿ, ಕ್ಯಾಮೆರಾ ಚಾಲಕ, ಎಲ್ಲರನ್ನೂ ನಿರ್ದೇಶಿಸುತ್ತಾ ಓಡಾಡುತ್ತಿದ್ದ ಬರ್ಲ್‌ಗೆ ಹಿಮ್ಮೇಳದವರು ನುಡಿಸುತ್ತಿದ್ದ ವಾದ್ಯವೃಂದದಲ್ಲಿ ಒಂದು ಅಪಶೃತಿ ಕೇಳಿ ಬಂದರೂ, ತಕ್ಷಣ ಅದು ತಿಳಿಯುತ್ತಿತ್ತು. ಕಾರ್ಯಕ್ರಮದ ಎಲ್ಲಾ ವಿಭಾಗಗಳ ಬಗ್ಗೆ ಇಂತಹ ಸೂಕ್ಷ್ಮ ಸಂವೇದನೆ ಬರ್ಲ್‌ನ ಯಶಸ್ಸಿಗೆ ಮುಖ್ಯ ಕಾರಣ.

ಅನೇಕ ಪ್ರಸಿದ್ಧ ನಗೆಪಟುಗಳಿಗೆ, ಸಮಯ ಸಿಕ್ಕಾಗಲೆಲ್ಲಾ ಹಾಸ್ಯ ಚಟಾಕಿ ಹಾರಿಸುವುದು ಒಂದು ತಡೆಯಲಾಗದ ಚಟವಾಗಿ ಬಿಡುತ್ತದೆ. ಈ ಚಟ ಕೈಲಾಸಂ ರವರಲ್ಲಿ ಇತ್ತೆಂದು ಕೇಳಿದ್ದೇನೆ. ರಾ.ಶಿ. ಯವರಲ್ಲಿ ಇದ್ದುದನ್ನು ಸ್ವತಃ ನೋಡಿದ್ದೇನೆ. ಬರ್ಲ್‌ಗೂ ಸಹಾ ಹವ್ಯಾಸವಿದ್ದು, ಇದರ ಪೂರೈಕೆಗಾಗಿ ಒಮ್ಮೊಮ್ಮೆ ಬೇರೆ ನಗೆಗಾರರ ಜೋಕುಗಳನ್ನು ಕದಿಯಬೇಕಾದ ಪ್ರಸಂಗ ಒದಗಿ, ''ಜೋಕು ಕಳ್ಳ'' ಎಂಬ ಬಿರುದು ಬರ್ಲ್‌ಗೆ ಸಂದಿತ್ತು, ಬರ್ಲ್ ಈ ಬಿರುದನ್ನು ಉದಾರ ಮನಸ್ಸಿನಿಂದಲೇ ಒಪ್ಪಿಕೊಂಡಿದ್ದ. ಒಮ್ಮೆ ಅಮೆರಿಕದ ಇನ್ನೊಬ್ಬ ಖ್ಯಾತ ಹಾಸ್ಯಗಾರ ಜಾಕ್ ಬೆನ್ನಿ ರೇಡಿಯೋದಲ್ಲಿ ಹಾಸ್ಯ ಚಟಾಕಿಗಳ ಕಾರ್ಯಕ್ರಮವೊಂದನ್ನು ನಡೆಸುತ್ತಿದ್ದ ಕಾಲದಲ್ಲಿ, ಮಿಲ್ಟನ್ ಹೀಗೆ ಹೇಳಿದ.

''ನಾನು ಮೊನ್ನೆ ಜಾಕ್ ಬೆನ್ನಿಯ ಕಾರ್ಯಕ್ರಮ ಕೇಳ್ತಾ ಇದ್ದೆ. ಜೋಕುಗಳು ಎಷ್ಟು ಚೆನ್ನಾಗಿದ್ವು ಅಂದ್ರೆ, ನಾನು ಬಿದ್ದು, ಬಿದ್ದು ನಗುಕ್ಕೆ ಶುರು ಮಾಡಿದಾಗ ಕೈಲಿದ್ದ ಪೆನ್ನು ಪೇಪರ‍್ರು ಎಲ್ಲಾ ಬಿದ್ದೋದ್ವು ರೀ.''

ಹಾಲಿವುಡ್‌ನಿಂದ ಹಿಂತಿರುಗಿದ ಮಿಲ್ಟನ್ ತನ್ನ ಸ್ನೇಹಿತರೊಂದಿಗೆ ಒಮ್ಮೆ ಜಂಭ ಕೊಚ್ಚಿಕೊಳ್ಳಲು ಪ್ರಾರಂಭಿಸಿದ.

''ಈಗ ತಾನೇ ನಾನು ಹಾಲಿವುಡ್‌ನಿಂದ ಬಂದೆ. ಬೆಟ್ಟಿ ಗ್ರೇಬಲ್ (ಆ ಕಾಲದ ಒಬ್ಬ ಖ್ಯಾತ ನಟಿ) ಮುಖಾನ ಎಷ್ಟು ಬಾರಿ ಚುಂಬಿಸಿದ ಅಂದ್ರೆ, ನಾನು ಚುಂಬಿಸಿದ ರಭಸಕ್ಕೆ ಆ ಫೋಟೋ ಫ್ರೇಂ ಕೂಡ ಕಿತ್ತು ಬಂತು. ಅಲ್ಲಿ ನಾನು ಒಂದು ಸೈನಿಕ ನೆಲೆಗೆ ಹೋದಾಗ, ನಾನು ಹೋದ ತಕ್ಷಣ ಸೈನಿಕರೆಲ್ಲಾ ಮಂಡಿ ಮೇಲೆ ಕೂತುಬಿಟ್ರು. ಅವರು ಕ್ರಾಪ್ ಆಟ (ಮಂಡಿ ಮೇಲೆ ಕೂತು ಆಡುವ ಗೋಲಿಯಾಟ) ಆಡ್ತಿದ್ರು ಅನ್ನೋದು ಬೇರೇ ವಿಷಯ.''

ಇನ್ನೊಮ್ಮೆ ಮಿಲ್ಟನ್ ತನ್ನ ಹಾಲಿವುಡ್ ದಿನಗಳ ಬಗ್ಗೆ ಹೀಗೆ ಹೇಳ್ತಾನೆ ''ಆ ದಿನಗಳು ಹೆಕ್ಟಿಕ್ ಆಗಿದ್ವು, ಹೆಕ್ಟಿಕ್ ಅಂದ್ರೆ ಹೇಗೆ ಅಂತೀರಿ! ಬಹಳಾ ಮಜಾ ಇರ್ತಿತ್ತು. ಮತ್ತೆ ಹೆಕ್ಟಿಕ್ ಅಂತ ಯಾಕೆ ಹೇಳ್ದೆ ಅಂತ ಕೇಳ್ಬೇಡಿ. ಹೆಕ್ಟಿಕ್ ಅಂದ್ರೆ ಏನು ಅಂತ ನನಗೆ ಗೊತ್ತಿದ್ರೆ ತಾನೆ. ಮಜಾ ಯಾಕೆ ಇರ್ತಿತ್ತು ಅಂತ ಕೇಳಿದ್ರಾ? ಒಮ್ಮೆ ಚಾರ್ಲಿ ಚಾಪ್ಲಿನ್‌ನ್ನ ನಾನು ಅನುಕರಣೆ ಮಾಡಿ ನಟಿಸಿದ್ದಕ್ಕೆ ನನಗೆ ಒಂದು ಬೆಳ್ಳಿ ಕಪ್ ಪಾರಿತೋಷಕ ಸಿಕ್ತು. ಅದನ್ನ ತೋರಿಸೋಕ್ಕೆ ನನ್ನ ನೆಂಟರನ್ನೆಲ್ಲಾ ಗಿರವಿ ಅಂಗಡೀಗೆ ಕರೆದುಕೊಂಡು ಹೋಗ್ತಿದ್ದೆ.''

ಫ್ಲಾರಿಡಾದಲ್ಲಿ ಕುದುರೆ ಜೂಜು ಪ್ರಸಿದ್ಧಿ. ಜೂಜಿನಲ್ಲಿ ಎಲ್ಲಾ ಕಳೆದುಕೊಂಡವನನ್ನು ''ಅವನು ಷರಟನ್ನು ಕಳೆದುಕೊಂಡ'' ಅಂತ ಹೇಳುವುದು ವಾಡಿಕೆ. ಮಿಲ್ಟನ್ ಒಮ್ಮೆ ಫ್ಲಾರಿಡಾದಿಂದ ಹಿಂತಿರುಗಿ ಹಾಸ್ಯ ಕಾರ್ಯಕ್ರಮವೊಂದನ್ನು ನಡೆಸುತ್ತಿದ್ದ.

''ನಾನು ನಿನ್ನೆ ತಾನೆ ಫ್ಲಾರಿಡಾದಿಂದ ಹಿಂದಕ್ಕೆ ಬಂದೆ. ಅಲ್ಲಿ ರೇಸ್‌ಕೋರ್ಸ್ ಮೇಲೆ ಒಂದು ಬಿಳೀ ಬಾವುಟ ಹಾಕಿದಾರಲ್ಲ ಅದು ಏನು ಗೊತ್ತೇ? ನನ್ನ ಷರಟು ರೀ ಅದು.'' ಇಷ್ಟು ಹೇಳಿ ಮುಂದಿನ ಸಾಲಿನಲ್ಲಿ ಕೂತಿದ್ದ ಬೋಡು ತಲೆಯನ್ನುದ್ದೇಶಿಸಿ,

''ರೀ ಮಿಸ್ಟರ್, ನಿಮಗೆ ಹೇಳ್ತಿರೋದು. ಸ್ವಲ್ಪ ತಲೆ ಎತ್ತಿ ಕೂತ್ಕೋತೀರ. ನೀವು ಹೀಗೆ ತಲೆ ಬಗ್ಗಿಸ್ಕೊಂಡು ಕೂತಿದ್ರೆ, ದೀಪದ ಬೆಳಕು ನಿಮ್ಮ ತಲೆ ಮೇಲೆ ಬಿದ್ದು ನನ್ನ ಕಣ್ಣಿಗೆ ಬಡಿದು, ಗ್ಲೇರ್ ಆಗಿ ಕಣ್ಣೇ ಬಿಡುಕೆ ಆಗ್ತಿಲ್ಲ ಸ್ವಾಮಿ!'' ಅಂದನಂತೆ.

1953 ರಲ್ಲಿ ಮಿಲ್ಟನ್ ರೂತ್‌ಳನ್ನು ಮದುವೆಯಾದ. ಗಂಡ ಹೆಂಡತಿಯರು 'ಮಧುಚಂದ್ರ'ಕ್ಕೆ ಮಯಾಮಿಗೆ ಹೋದಾಗ ಪತ್ನಿಯ ಕೈಯಲ್ಲಿ ಒಂದು ವಿಶೇಷವಾದ ಪರ್ಸ್ ಇತ್ತು. ಆ ಪರ್ಸ್‌ನಲ್ಲಿ ಏನಿತ್ತು ಗೊತ್ತೇ? ಗಂಡನಿಗೋಸ್ಕರ ಪತ್ನಿ ಜೋಪಾನವಾಗಿ ತೆಗೆದಿರಿಸಿದ್ದ ಹವಾನಾ ಸಿಗಾರ್‌ಗಳು.

ಮಿಲ್ಟನ್ ಬರ್ಲ್ ನಿಜಕ್ಕೂ ಹಾಸ್ಯ ಲೋಕದಲ್ಲಿ ಹೊಳೆದು ಹೋದ ಪ್ರತಿಭೆ.

ತುಂತುರು

- ದನಂಆ

ಈಥೈಲ್ ಆಲ್ಕೋಹಾಲ್‌ಗೂ ಮೀಥೈಲ್ ಆಲ್ಕೋಹಾಲ್‌ಗೂ ಇರುವ ವ್ಯತ್ಯಾಸ?

ಒಂದು ಸ್ವರ್ಗದಲ್ಲಿರುವ ಭ್ರಮೆ ಹುಟ್ಟಿಸಿದರೆ ಇನ್ನೊಂದು ಸ್ವರ್ಗಕ್ಕೇ ಕೊಂಡೊಯ್ಯುತ್ತದೆ.

★★★

ಕೆಟ್ಟ ವಿಮರ್ಶೆ ಬಂದಾಗ ಮಾತ್ರ ಲೇಖಕ 'ಪುಸ್ತಕವನ್ನು ಪೂರ್ತಿ ಓದದೇ ವಿಮರ್ಶೆ ಬರೆಯಲಾಗಿದೆ' ಎಂದು ಗೊಣಗುತ್ತಾನೇಕೆ?

★★★

ಅತ್ಯುತ್ತಮ ಸಂಸದೀಯ ಚರ್ಚೆ ನಡೆಯುವುದು ಸಂಸತ್ತಿನ ಹೊರಗೆ - ಸಭೆಯಲ್ಲಿ ಭಾಗವಹಿಸಬೇಕೇ ಅಥವಾ ಬಹಿಷ್ಕರಿಸಬೇಕೇ ಎಂಬುದನ್ನು ನಿರ್ಧರಿಸಲು.

★★★

ಮಾಡುವ ಪಾತ್ರದ ಬಗ್ಗೆ ಮನ ಒಪ್ಪಿಗೆಯಾಗದಿದ್ದಲ್ಲಿ ಮನ ಒಪ್ಪುವಂತಹ ಪಾತ್ರ ಮಾಡಲು ಸಾಧ್ಯವಾಗುವದಿಲ್ಲ.

★★★

ತಲೆಯೇ ಇಲ್ಲದಿದ್ದಲ್ಲಿ ಟೋಪಿಯ ಬಗ್ಗೆ ಚಿಂತಿಸಬೇಕಾಗಿ ಬರದು.

★★★

ನನ್ನ ದೃಷ್ಟಿಯಲ್ಲಿ ಒಂಟಿಯಾಗಿರುವದೆಂದರೆ ಷಾಪಿಂಗ್ ಮಾಡುವುದು. ಅದನ್ನು ರಿಟೈಲ್ ಥರಪಿ ಎಂದು ಕರೆಯಬಹುದು.

★★★



ಅದಕ್ಕೇ ಮತ್ತೆ, ಆ ಕಂಪೆನಿಯೋರ
ಉತ್ಪಾದನೆ ಹೆಚ್ಚಾಗಿರೋದು

ಅಪರಂಜಿ ಸಂಸಾರ

- ಬೇಲೂರು ರಾಮಮೂರ್ತಿ

ತಿಮ್ಮೇಶನಿಗೆ ಸಖತ್ ತಲೆ ಕಡೀತಿತ್ತು - ಒಳಗೂ ಹೊರಗೂ - ಹೊರಕೆರೆತನ ಹೇಗಾದ್ರೂ ಮಾಡಿ ರಪರಪಾಂತ ಕೆರ್ಕೊಂಡು ಕಡಿಮೆ ಮಾಡ್ಕೊಬಹುದಿತ್ತು. ಆದ್ರೆ ಒಳಕೆರೆತಕ್ಕೆ ಏನ್ ಮಾಡೋದು. ರೂಟ್ ಕಾಸ್ ಅಂತಾರಲ್ಲ ಹಾಗೆ ರೂಟ್‌ಗೆ ಹೋಗಬೇಕು. ರೂಟ್‌ಗೆ ಹೋಗಕ್ಕೆ ಕಾಸೇನು ಖರ್ಚ್ ಮಾಡಬೇಕಿಲ್ಲ ಅಂತ ಇರುವಾಗ ಕೇಳಿಸಿಯೇ ಬಿಡ್ತಪ್ಪ ಅಬ್ಬರದ ವಾಣಿ "ಅಯ್ಯೋ ನಿಮ್ಮನೆ ಕಾಯ್ವಾಗ ಬೆಳಗಾಗೆದ್ದು ಬುಷ್‌ತರ ತಲೆ ಮೇಲೆ ಕೈ ಹೊತ್ಕೊಂಡು ಕುಕ್ಕರಬಡ್ಕೊಳೋಕೆ ಇಲ್ಲೇನು ಸದ್ದಾಂ ಹುಸೇನಿದಾನಾ ಇಲ್ಲಾ ಓಸಾಮಾ ಬಿನ್ ಲ್ಯಾಡನ್ ಇದಾನಾ ಹೋಗಿ ಒಲೆ ಉರಿ ಹಾಕಿ ತರಕಾರಿ ತಗೊಂಬನ್ನೀ." ಪುಣ್ಯವಂತರು ಅನೇಕರು ಬೆಳಗಾಗೆದ್ದು ಪ್ರಜಾವಾಣಿ ಓದ್ತಾರೆ. ಆದರೆ ನನ್ನಂಥೋನಿಗೆ ಈ ಅಬ್ಬರದ ವಾಣಿ ಕೇಳೋ ಗ್ರಹಚಾರ ಬಂತಲ್ಲಪ್ಪ ಅಂತ ಬಾಯಿ ಬಡ್ಕೊಂಡ. ಅವನ ಹೆಂಡ್ತಿ ಸ್ವಲ್ಪ ಔಟ್‌ಸ್ಪೋಕನ್ನು ಅಂದ್ರೆ ಮನೆ ಔಟ್‌ಸೈಡೇ ಬಂದು ಮಾತಾಡೋದು. ಆದರ ಉದ್ದೇಶ ಎರಡು; ಒಂದು ಈ ಮನೆ ಯಜಮಾನಿ ನಾನೇ ಅನ್ನೋದು ಗೊತ್ತಾಗ್ಲಿ ಅಂತ, ಇನ್ನೊಂದು ನಾನು ಗಂಡನ್ನ ಹೇಗೆ ಹದ್‌ಬಸ್ತ್‌ನಲ್ಲಿಟ್ಕೊಂಡಿದೀನೀಂತ ಎಲ್ರಿಗೂ ಗೊತ್ತಾಗ್ಲಿ ಅಂತ. ಪಾಪ ನಮ್ಮ ತಿಮ್ಮೇಶ ಕತ್ತರಿ ಅಲುಗಲ್ಲಿ ಸಿಕ್ಕೊಂಡಿರೋ ಅಡಿಕೆ ಹಾಗಾಗಿದಾನೆ. ಹೆಂಡ್ತಿ ಹೀಗೆ ಕಿರುಚಾಡಿದಾಗ್ಲೇ ಅವನಿಗೆ ಕಪನೀಪತಿ ನೆನಪಾಗೋದು. ಆಹಾ ಕಪನೀಪತಿ ಸಂಸಾರ ಏನು ಸುಂದರ, ಏನು ಮಧುರ. ಅವನ ಮನೇಲಿ ನಿತ್ಯ ಸುಬ್ಬಲಕ್ಷ್ಮಿ ಸುಪ್ರಭಾತ ಹಾಕಲ್ಲ; ಬದಲಿಗೆ ಕಪನೀಪತಿನೂ ಅವನ ಹೆಂಡ್ತಿನೂ ಕೈ ಕೈ ಹಿಡ್ಕೊಂಡು ನಮ್ಮ ಸಂಸಾರ ಆನಂದ ಸಾಗರ ಅಂತ ಹಾಡ್ತಾರಂತೆ. ಕಪನೀಪತಿ ಹೆಂಡ್ತಿ ಬಗ್ಗೆ ಹೊಗಳುವಾಗ ತಿಮ್ಮೇಶನಿಗೆ ತನ್ನ ಹೆಂಡ್ತಿ ಬಗ್ಗೆ ಉಗುಳಬೇಕೆನಿಸುತ್ತೆ. ಆದರೆ ಕಪನೀಪತಿ ಸ್ವಲ್ಪ ಅತಿ ಮಾಡ್ತಾನೆ ಅನಿಸಿಬಿಡುತ್ತೆ. ಹೆಂಡ್ತಿ ಸ್ವಲ್ಪ ಪ್ರೀತಿ ತೋರಿಸಿದರೆ ಪ್ರೀತಿ ಧಾರೆನೇ ಎರೆದ್ಲು ಅನ್ನೋದು, ಒಂದೋ ಎರಡೋ ಪ್ರೀತಿ ಮಾತಾಡಿದ್ರೆ ಇಡೀ ದಿನ ಪ್ರೀತಿ ಮಾತಾಡ್ತನೇ ಇದ್ಲು ಅಂತ ಹೇಳಿ ಕೊನೆಗೆ ಏನಪ್ಪ ಅಂದ್ರೆ ನನ್ ಹೆಂಡ್ತಿ ಬಿಟ್ರೆ ಇಲ್ಲ ಅಂತ ತನ್ನ ಬೆನ್ನು ತಾನೇ ತಟ್ಕೊಳೋದು, ಇರ್ಲಿ ಹತ್ತೋರಿಗೆ ಹೆಗ್ಗಣ ಮುದ್ದು ಕಟ್ಕೊಂಡೋರಿಗೆ ಕೋಡಗ ಮುದ್ದು ಅವನ ಹೆಂಡ್ತಿ ಅವನಿಗೆ ಮುದ್ದು ಅದರಿಂದ ಊರಿಗೇನು ಉಪಯೋಗ ಆದ್ರೆ ಈ ನನ್ನ ಮಗ ಹೆಂಡ್ತಿನ ಹೊಗಳೋದು ನಿಲ್ಸಿ ಅವರಿಬ್ಬರೂ ಸಖತ್ತಾಗಿ ಹಾವು ಮುಂಗುಸಿ ತರ ಕಿತ್ತಾಡೋ ಹಾಗೆ ಮಾಡ್ಬಿಟ್ರೆ, ನಾನ್ಯಾಕೆ ಅಂತ ತಿಮ್ಮೇಶ ಛಾಲೆಂಜ್ ತಗೊಂಡೇ ಬಿಟ್ಟ. ಕಪನೀಪತಿ ತಿಮ್ಮೇಶನ ಹೆಂಡ್ತಿ ಬಗ್ಗೆ, ಅವನ ಸಂಸಾರದ ಬಗ್ಗೆ ಹಂಗ್ಸೀ ಹಂಗ್ಸೀ ಮಾತಾಡ್ತಿದ್ದ. ಈ ವಿಚಾರನ ಗೋಪ್ಯವಾಗಿ ಕಟ್ಟೇಲಿ ಡಿಸ್ಕಸ್ ಮಾಡ್ತ, ಸಕ್ಸಸ್‌ಗೆ ಕಾದ. ಒಂದು ಎರಡು ಮೂರು ತಿಂಗಳು ಕಳೆದು

ಹೋಯ್ತು ಯಾವ ಪ್ಲಾನೂ ಮೂರಡಿಗಿಂತ ಮುಂದೆ ಹೋಗ್ತಿಲ್ಲ ಏನಪ್ಪ ಮಾಡೋದು ಅಂತ ಒಂಥರ ಹತಾಶನಾದ.

ಎಷ್ಟೋ ಸಾರಿ ಹತಾಶೆನೇ ದಾರಿ ತೋರಿಸುತ್ತಂತೆ. ಕಡೆಗೂ ತಿಮ್ಮೇಶನಿಗೆ ದಾರಿ ಸಿಕ್ಕೇಬಿಡ್ತು. ಒಂದಿನ ಕಪನೀಪತಿ ಇಲ್ದೆ ಇದ್ದಾಗ ಅವನ ಮನೆಗೆ ಹೋಗಿ ''ನೋಡಿ ಸಾವಿತ್ರಮ್ಮ ನಮ್ಮನೆಗೊಬ್ಬ ಕೈ ನೋಡೋರು ಬಂದಿದ್ರು ನೂರಕ್ಕೆ ನೂರು ಸರಿಯಾಗಿ ಹೇಳಿದರು ನನ್ನ ಹೆಂಡ್ತಿನಂತೂ ಅವರನ್ನ ದೇವರು ಅಂತ ಪೂಜೆ ಮಾಡೋಕೆ ಶುರು ಮಾಡಿದ್ಲು. ಕರಾರುವಕ್ಕಾಗಿ ಹೇಳ್ತಾನೆ, ಹಿಂದಾಗಿದ್ದು ಮುಂದೆ ಆಗೋದು ಎಲ್ಲ. ನೀವು ಹೂ ಅಂದ್ರೆ ನಿಮ್ಮನೆಗೂ ಕಳಿಸ್ತಿನಿ'' ಅಂದ. ಅದಿಕ್ಕೆ ಸಾವಿತ್ರಮ್ಮ ''ಕಳಿಸಿ ನಾನೂ ಒಂದ್ಸಾರಿ ಕೇಳ್ತಿನಿ'' ಅಂದ್ಲು. ಅದಕ್ಕೆ ತಿಮ್ಮೇಶ ''ಅದು ಹಾಗಲ್ಲ ಅದೊಂದು ವ್ರತ. ಅವರು ಒಂದು ವಾರ ನಿಮ್ಮ ಕೈ ನೋಡಿ ಶಾಸ್ತ್ರ ಹೇಳ್ತಾರೆ ಈ ವಿಷಯ ಮನೆ ಯಜಮಾನನಿಗೆ ಗೊತ್ತಾಗಬಾರದು ಅರೆ ನನ್ ಹೆಂಡ್ತಿ ಶಾಸ್ತ್ರ ಕೇಳಿದ ವಿಷಯ ನನಗೇ ಗೊತ್ತಿರಲಿಲ್ಲ ಅಂತೀನಿ ಅವರು ಸರಿಯಾಗಿ ಹತ್ತು ಗಂಟೆಗೆ ಬರ್ತಾರೆ ಅರ್ಧಗಂಟೆ ಶಾಸ್ತ್ರಹೇಳಿ ಹೊರಟು ಹೋಗ್ತಾರೆ ಮತ್ತೆ ಮಾರನೇ ದಿನ ಹತ್ತುಗಂಟೆಗೆ ಬರ್ತಾರೆ. ಹೀಗೆ ವಾರದ ಆರು ದಿನದಲ್ಲಿ ನಿಮ್ಮ ಭವಿಷ್ಯ ಪೂರ್ತಿ ಹೇಳಿರ್ತಾರೆ. ಆರನೇ ದಿನ ನೀವು ನಿಮ್ಮ ಯಜಮಾನರಿಗೆ ಹೇಳಿ ಅವರನ್ನ ಮನೇಲಿ ಇರೋಕ್ಕೆ ಹೇಳಿರಬಹುದು'' ಅಂದ. ಅದಕ್ಕೆ ಒಪ್ಪಿ ಸಾವಿತ್ರಮ್ಮ ದುಡ್ಡು ಕಾಸು ಅಂದ್ರೆ, ಅದೆಲ್ಲ ನೀವು ಕೊಟ್ಟಷ್ಟು ಅಂದ. ಅಂತೂ ಸಾವಿತ್ರಮ್ಮನನ್ನು ಒಪ್ಪಿಸಿದ್ದಾಯ್ತು ದಿನಾಂಕನೂ ಗೊತ್ ಮಾಡಿದ್ದಾಯ್ತು. ಇನ್ನು ಈ ಕಡೆ ಕಪನೀಪತಿ ಸಮಯಕ್ಕೆ ಕಾದ. ಅದಕ್ಕೂ ಒಂದು ವಾರ ಆಯ್ತು. ''ಏನಯ್ಯ ಕಪನೀಪತಿ ಬೆಳ್ಳಗಿರೋದೆಲ್ಲ ಹಾಲು ಅಂತ ನಂಬ್ತೀಯಲ್ಲ ನೀನು... ನೋಡು ಈಚೀಚೆಗೆ ನೀನು ಆಫೀಸಿಗೆ ಹೋದ ತಕ್ಷಣ ನಿಮ್ಮನೆಗೆ ಯಾರೋ ಬರ್ತಾರೆ ನಿನ್ ಹೆಂಡ್ತಿನ ಕೈ ಹಿಡ್ಕೊಂಡು ಕೂತಿರ್ತಾನೆ ಇನ್ನು ಏನೇನು ಮಾಡ್ಕೊತಾರೋ ನಮ್ಮ ಬೀದೀಲಿ ಇದು ಗುಲ್ಲೋ ಗುಲ್ಲು ನಿನಗೆ ಹೇಗೆ ಹೇಳೋದು ಅಂತ ಎಲ್ರೂ ಒದ್ದಾಡ್ತಿದ್ರು ನಾನೇ ಲೀಡ್ ತಗೊಂಡೆ ನೋಡು ನಿನ್ನ ಸಂಸಾರನ ಸ್ವಲ್ಪ ಸರಿ ಮಾಡ್ಕೊಪ್ಪ'' ಅಂತ ತಿಮ್ಮೇಶ. ಕೋಪಗೊಂಡ ಕಪನೀಪತಿ ತಿಮ್ಮೇಶನ ಕೆನ್ನೆಗೆ ಬಾರಿಸಿದ. ಆದ್ರೆ ತಿಮ್ಮೇಶ ಪಟ್ಟು ಬಿಡಲಿಲ್ಲ ಹೇಳಿದ್ದೇ ಹೇಳ್ದ ಹೇಳಿದ್ದೇ ಹೇಳ್ದ ಕಪನೀಪತಿನ ನಂಬಿಸಿದ ಕಡೆಗೆ ಮಾರನೇ ದಿನ ಅವನು ಜಾಸೂಸಿ ಮಾಡೋಕ್ಕೂ ಒಪ್ಪಿಸಿದ.

ಮಾರನೇ ದಿನ ಎಂದಿನಂತೆ ಕಪನೀಪತಿ ಆಫೀಸಿಗೆ ಹೊರಟ. ಅವನ ಜೊತೆ ತಿಮ್ಮೇಶನೂ ಇದ್ದು ಇಬ್ಬರೂ ಎದುರು ಮನೆ ಓಣೀಲಿ ಕೂತು ಮನೆಕಡೆ ಇಣುಕಿದರು ಹತ್ತು ಗಂಟೆಗೆ ಸರಿಯಾಗಿ ಯಾರೋ ಒಬ್ಬ ಮನೆಯೊಳಗೆ ಹೋದ. ಕಪನೀಪತಿ ತಲೆ ತಿರುಗಿತು. ಮಾರನೇ ದಿನ ಕಿಟಕಿಯಿಂದ ಇಣುಕಿದ ಅವನ್ಯಾರೋ ಅಬ್ಬೆಪಾರಿ ಹೆಂಡ್ತಿ ಕೈ ಹಿಡಿದು ಕೂತಿದ್ದು ನೋಡಿ ತಲೆ ತಿರುಗಿತು. ಹೆಂಡ್ತಿ ಏನೋ ಮಾತಾಡ್ತಿದ್ದಾಳೆ. ನಗ್ತಿದ್ದಾಳೆ.

ಎಲಾ ಇವಳಾ ಇವಳಿಗೇನು ಬಂತು ಅಂತ. ತಿಮ್ಮೇಶನಿಗೆ ಒಳಗೊಳಗೇ ನಗು. ಆಯ್ತು ಆಯ್ತು ಇವರ ಸಂಸಾರ ಮುರಿದುಬಿತ್ತು ಪೈಟ್ಲಗ ಅಂತ ಮರಕೋತಿ ಆಡಿದ. ಈಗಲೋ ಆಗಲೋ ಕಪನೀಪತೀನೂ ಅವನ ಹೆಂಡ್ತೀನೂ ಜಗಳ ಆಡ್ತಾರೆ ಅಂತ ಮನಸ್ಸಿನಲ್ಲಿ ಮಂಡಿಗೆ ತಿಂದ. ಎಲ್ಲ ಸಂಸಾರನೂ ತೂತು ಅಂತ ಇವತ್ತು ಎಷ್ಟನೇ ಬಾರಿಗೋ ಖಾತರಿಯಾಗುತ್ತೆ ಅಂದ್ಕೊಂಡ. ನನ್ ಹೆಂಡ್ತಿ ಹಾಗೆ ನನ್ ಹೆಂಡ್ತಿ ಹೀಗೆ ಅಂತ ಮೆರೀತಾ ಇದ್ದ ಬಡ್ಡಿ ಮಗ ಅಂತ ಒಳಗೊಳಗೇ ಆನಂದಿಸಿದ.

ಅವತ್ತು ಬೆಳಿಗ್ಗೆ ಇನ್ನೇನು ಆಫೀಸಿಗೆ ಹೊರಡಬೇಕು ಅನ್ನುವಾಗ ಕಪನೀಪತಿ ಬಂದೋನೇ ಮುಖ ಮೂತಿ ನೋಡದೇ ಹಿಗ್ಗಾ ಮುಗ್ಗ ಹೊಡೆದ. ಅವನ ಹಿಂದೆ ಜ್ಯೋತಿಷಿ ಇದ್ದ. ತಿಮ್ಮೇಶನೇ ಅರೇಂಜ್ ಮಾಡಿದ್ದ ಕಳ್ಳ ಜ್ಯೋತಿಷಿ. ಮನೇಲಿ ಏನೋ ಸದ್ದು ಅಂತ ತಿಮ್ಮೇಶನ ಹೆಂಡ್ತಿ ಬಂದು ನೋಡಿದರೆ ಗಂಡ ಕೆಳಗೆ ಬಿದ್ದಿದ್ದಾನೆ. ಕಪನೀಪತಿ ರೌದ್ರಾವತಾರ ತಾಳಿ ನಿಂತಿದಾನೆ. ಬದ್ಮಾಷ್.. ಗಂಡ ಹೆಂಡ್ತಿ ಮಧ್ಯೆ ತಂದಿಟ್ಟು ತಮಾಷೆ ನೋಡ್ತೀಯಾ ಇನ್ನೊಂದ್ಸಾರಿ ನನ್ ಸಂಸಾರದ ತಂಟೆಗೆ ಬಂದ್ರೆ ಕೈ ಕಾಲು ಮುರಿದುಬಿಟ್ಟೇನು ಅಂದು ಭುಸುಗುಟ್ಟಿದ. ತಿಮ್ಮೇಶನ ಹೆಂಡ್ತಿ ಕಡೆ ನೋಡಿ ''ನಿನ್ ಗಂಡಂಗೆ ಸ್ವಲ್ಪ ಬುದ್ಧಿ ಕಲಿಸಮ್ಮ ಅಲ್ಲಿ ನನ್ ಹೆಂಡ್ತಿಗೆ ಗಂಡ ಇಲ್ದಿರುವಾಗ ಭವಿಷ್ಯ ಕೇಳು ಅಂತ ಹೇಳಿ ಇಲ್ಲಿ ನನಗೆ ನಿನ್ ಹೆಂಡ್ತಿ ಯಾರ್ದೋ ಕೈ ಹಿಡ್ಕೊಂಡ್ ಕೂತಿರ್‍ತಾಳೆ ಅಂದು ಜೊತೆಗೆ ಈ ದರವೇಶಿನ ಜ್ಯೋತಿಷಿ ಅಂತ ನನ್ ಹೆಂಡ್ತಿ ಕೈ ಹಿಡ್ಕೊಂಡ್ ಕೂತ್ಕೊಳೋ ಹಾಗೆ ಮಡಿದಾನೆ ಬದ್ಮಾಷ್... ಎಷ್ಟಾದ್ರೂ ನನ್ ಹೆಂಡ್ತಿಗೆ ನಾನು ಅಪರಂಜಿ ನನಗೆ ಅವಳು ಅಪರಂಜಿ. ಗೊತ್ತೇನೋ, ನಮ್ಮದು ಅಪರಂಜಿ ಸಂಸಾರ ಇದರಲ್ಲಿ ಯಾವ ನನ ಮಗನೂ ಹುಳಿ ಹಿಂಡಕ್ಕಾಗಲ್ಲ ತಿಳ್ಕೊ'' ಅಂದು ಇನ್ನೊಂದ್ಸಾರಿ ಝಾಡಿಸಿ ಹೊರಟು ಹೋದ, ತಿಮ್ಮೇಶ ನೋವಿನಿಂದ ನರಳಿದ. ಜ್ಯೋತಿಷಿ ರೂಪದವನು ''ಸಾರ್ ನನಗೆ ದುಡ್ ಕೊಡ್ತೀನಿ ಅಂದಿದ್ರಲ್ಲ'' ಅಂತ ಬಾಯಿ ತೆಗೆದಿದ್ದಕ್ಕೆ ಉಗಿದು ಕಳಿಸಿದ ತಿಮ್ಮೇಶ.

ಹೆಂಡ್ತಿ ಸಾಕ್ಷಾತ್ ಚಾಮುಂಡೇಶ್ವರಿ ಅವತಾರ ತಾಳಿ ನಿಂತಿದ್ದನ್ನು ಕಂಡು ಇನ್ನೇನು ಕಾದಿದೆಯೋ ದೇವರೇ ಅಂತ ಕಾಲ್ಗೆದಾಗ ಅವಳು ನಿಂತ್ಕೊಳ್ರಿ ಅಂದು ಕಿರುಚಿದಳು. ಇನ್ನೊಂದ್ಸಾರಿ ಬೇರೆಯವರ ಸಂಸಾರದಲ್ಲಿ ಇಂಥಾ ಕೆಲಸ ಮಾಡಿದ್ರೋ ನಿಮ ಗತಿ ನೆಟ್ಟಗಾಗಲ್ಲ ನೋಡಿ. ಹೋಗ್ರೀ ಉದ್ದಿನ ಬೇಳೆ ನೆನೆಸಿದೀನಿ ತಿರುವ್ರೀ ಅಂದು ಕುತ್ತಿಗೆ ಹಿಡಿದು ಒರಳು ಕಲ್ಲಿನ ಬಳಿಗೆ ದೂಡಿದಳು. ಪಾಪ ಆ ಕ್ಷಣಕ್ಕೆ ತಿಮ್ಮೇಶನಿಗೆ ಬೇಡಾ ಬೇಡಾ ಅಂದ್ರೂ ಸತ್ಯ ಹರಿಶ್ಚಂದ್ರ ಚಿತ್ರದ ನಕ್ಷತ್ರಿಕ ಹಾಡೋ 'ಏನಿದೀ ವನವಾಸವೊ ಏನಿದೀ ಗ್ರಹಚಾರವೊ ಏನ ಮಾಡಿದೆನೆಂದು ಈಗತಿ ನನಗೆ ತಂದೆಯೊ ಪಶುಪತಿ ನೆನಪಾಯಿತು.'

★★★

ಪರ್ಲ್‌ಪೆಟ್ ಜಾರ್ ಮತ್ತು ಕಾಫಿ

(ವಾಣಿ ಹೇಳಿದ್ದು)

ದಿನನಿತ್ಯ ಜೀವನದಲ್ಲಿ ಕೆಲಸದ ಒತ್ತಡ ತೀರ ಹೆಚ್ಚಾದರೆ, ದಿಕ್ಕೇ ತೋಚದಂತಾದರೆ, ಈ ಕತೆಯನ್ನು ನೆನಪಿಸಿಕೊಳ್ಳಿ.

ಒಬ್ಬ ಪ್ರೊಫೆಸರ್ ತರಗತಿಯಲ್ಲಿ ವೇದಿಕೆಯ ಮೇಲೆ ನಿಂತಿದ್ದರು. ಅವರ ಮುಂದೆ ಮೇಜಿನ ಮೇಲೆ ಒಂದು ಪರ್ಲ್‌ಪೆಟ್ ಜಾರ್ ಹಾಗೂ ಇತರ ಹಲವು ವಸ್ತುಗಳಿದ್ದವು. ತರಗತಿ ಶುರುವಾದ ಕೂಡಲೇ, ನಮ್ಮ ಪ್ರೊಫೆಸರ್ ಏನೂ ಮಾತನಾಡದೇ, ತಮ್ಮ ಮುಂದಿದ್ದ ಜಾರ್ ಅನ್ನು ತೆಗೆದುಕೊಂಡು ಅದನ್ನು ಪುಟ್ಟ ಪ್ಲಾಸ್ಟಿಕ್ ಚೆಂಡುಗಳಿಂದ ತುಂಬಲು ಪ್ರಾರಂಭಿಸಿದರು. ಬೇಗನೆ ಜಾಡಿ ಚೆಂಡುಗಳಿಂದ ತುಂಬಿಹೋಯಿತು. ಆಗ ಪ್ರೊಫೆಸರ್, 'ಈಗ ಜಾಡಿ ತುಂಬಿದೆಯೇ?' ಅಂತ ವಿದ್ಯಾರ್ಥಿಗಳನ್ನು ಕೇಳಿದರು. 'ತುಂಬಿದೆ' ಎಂಬ ಉತ್ತರ ಮಾರ್ದನಿಸಿತು.

ನಂತರ ಪ್ರೊಫೆಸರ್ ಒಂದು ಗಾಜಿನ ಗೋಲಿಗಳಿದ್ದ ಡಬ್ಬಿಯನ್ನು ತೆಗೆದು, ಅದರಲ್ಲಿದ್ದ ಗೋಲಿಗಳನ್ನು ಜಾಡಿಯಲ್ಲಿ ತುಂಬಲು ಶುರುಮಾಡಿದರು. ಜಾಡಿಯನ್ನು ಸ್ವಲ್ಪ ಅಲುಗಾಡಿಸಿದ ತಕ್ಷಣ ಗೋಲಿಗಳು ಜಾಡಿಯನ್ನು ಸಂಪೂರ್ಣವಾಗಿ ಆಕ್ರಮಿಸಿದವು. ಪುನಃ ಪ್ರೊಫೆಸರಿಂದ ಅದೇ ಪ್ರಶ್ನೆ. ವಿದ್ಯಾರ್ಥಿಗಳಿಂದ ಅದೇ ಮಾರ್ದನಿ.

ಈಗ ಪ್ರೊಫೆಸರ್ ಒಂದು ಬಟ್ಟಲಿನಲ್ಲಿ ತುಂಬಿದ ಮರಳನ್ನು ತೆಗೆದುಕೊಂಡು ಜಾಡಿಗೆ ಸುರಿದು ಚೆನ್ನಾಗಿ ಅಲುಗಾಡಿಸಿದರು. ಗೋಲಿ ಮತ್ತು ಚೆಂಡುಗಳ ನಡುವೆ ಇದ್ದ ಜಾಗವನ್ನೆಲ್ಲಾ ಮರಳು ಆಕ್ರಮಿಸಿತು. ಪ್ರಶ್ನೆ, ಉತ್ತರ, ಗಳ ಪುನರುಕ್ತಿಯಾಯಿತು.

ಕೊನೆಯದಾಗಿ ನಮ್ಮ ಪ್ರೊಫೆಸರ್ ಮೇಜಿನ ಕೆಳಗಿನಿಂದ ಎರಡು ಬಟ್ಟಲುಗಳನ್ನು ತೆಗೆದರು. ಎರಡರಲ್ಲೂ ಬಿಸಿ ಬಿಸಿ ಕಾಫಿ ಹಬೆಯಾಡುತ್ತಿತ್ತು. ಎರಡೂ ಬಟ್ಟಲುಗಳಲ್ಲಿದ್ದ ಕಾಫಿಯನ್ನು ಜಾಡಿಯಲ್ಲಿ ಸುರಿದರು ಗುರುಮಹಾಶಯರು. 'ಒಳ್ಳೇ ಕಾಫಿಯನ್ನು waste ಮಾಡ್ತಿದೀರಲ್ಲಾ ಸಾರ್' ಅಂತ ಒಬ್ಬ ವಿದ್ಯಾರ್ಥಿ ಕೂಗಿದ. ಗುರುಗಳು ಅವನ ಆಕ್ರಂದನಕ್ಕೆ ಕಿವಿಗೊಡದೆ, ಕಾಫಿಕಪ್ಪುಗಳನ್ನು ಪೂರ್ತಿ ಖಾಲಿ ಮಾಡಿದರು.

ಅಮೇಲೆ ಅವರು ತಲೆಯೆತ್ತಿ ಮಾತನಾಡಲು ಶುರುಮಾಡಿದರು.


'ಈ ಪರ್ಲ್‌ಪೆಟ್ ಜಾಡಿಯೇ ನಿಮ್ಮ ಜೀವನ ಅಂತ ಊಹಿಸಿ. ಇದರಲ್ಲಿನ ಪ್ಲಾಸ್ಟಿಕ್ ಚೆಂಡುಗಳು ನಿಮ್ಮ ಜೀವನದ ಅತಿಮುಖ್ಯ ಅಂಶಗಳನ್ನು ಬಿಂಬಿಸುತ್ತವೆ. ನಿಮ್ಮ ಹೆಂಡತಿ, ಮಕ್ಕಳು, ಗೆಳೆಯರು, ಅತ್ಯಂತ ಆಪ್ತವಾದ ಪ್ರವೃತ್ತಿಗಳು ಇತ್ಯಾದಿ. ಒಟ್ಟಿನಲ್ಲಿ ಎಲ್ಲವನ್ನೂ ಕಳೆದುಕೊಂಡರೂ ಇವಿಷ್ಟರಿಂದ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಲು ಸಾಕಾಗಿರುವ ಅಂಶಗಳು ಈ ಪ್ಲಾಸ್ಟಿಕ್ ಚೆಂಡುಗಳು. ಗಾಜಿನ ಗೋಲಿಗಳು ನಿಮ್ಮ ಜೀವನದ ಇತರ ಮುಖ್ಯವಾದ ಅಂಗಗಳನ್ನು ಬಿಂಬಿಸುತ್ತವೆ. ನಿಮ್ಮ

ಉದ್ಯೋಗ, ಆಸ್ತಿಪಾಸ್ತಿ ಇತ್ಯಾದಿ. ಮರಳು ನಿಮ್ಮ ಜೀವನವನ್ನು ತುಂಬಿರುವ ಇನ್ನೆಲ್ಲ ಕಾರ್ಯ ಚಟುವಟಿಕೆಗಳು. ಜಾಡಿಯಲ್ಲಿ ನೀವು ಮೊದಲು ಮರಳನ್ನು ತುಂಬಿದರೆ, ಪ್ಲಾಸ್ಟಿಕ್ ಚೆಂಡುಗಳಿಗೆ, ಗಾಜಿನ ಗೋಲಿಗಳಿಗೆ ಜಾಗವೇ ಇರುವುದಿಲ್ಲ ಇಲ್ಲವೇ. ಜೀವನದಲ್ಲಿ, ಪ್ಲಾಸ್ಟಿಕ್ ಚೆಂಡುಗಳಿಗೆ, ಗಾಜಿನ ಗೋಲಿಗಳಿಗೆ ಪ್ರಾಧಾನ್ಯತೆ ನೀಡಿ. ಸಮಯ ಮಿಕ್ಕಿದರೆ ಮಿಕ್ಕ ಚಟುವಟಿಕೆಗಳು ನಿಮ್ಮ ಬಾಳನ್ನು ತುಂಬಲಿ.'

ಒಬ್ಬ ವಿದ್ಯಾರ್ಥಿ ಕೈ ಎತ್ತಿ ಒಂದು ಪ್ರಶ್ನೆ ಕೇಳಿದ. 'ಕಾಫಿ ಏನನ್ನು ಪ್ರತಿಬಿಂಬಿಸುತ್ತದೆ ?'

ನಸುನಗುತ್ತಾ, ಗುರುಗಳು ಹೀಗೆಂದರು.

'ಬಹು ಒಳ್ಳೆಯ ಪ್ರಶ್ನೆ. ನಿಮ್ಮ ಬಾಳು ಎಷ್ಟೇ ಗುರುತರವಾದ ಕಾರ್ಯಚಟುವಟಿಕೆಗಳಿಂದ ತುಂಬಿರಲಿ. ಗೆಳೆಯನೊಂದಿಗೆ ಒಂದು ಕಪ್ ಕಾಫಿ ಕುಡಿಯಲು ಎಂದಿಗೂ ಕಾಲಾವಕಾಶ ಇದ್ದೇ ಇರುತ್ತೆ.'



ಹಂದಿಯ ಜನ್ಮ

(ಮೂಲ - ತೆಲುಗು; ನಿರೂಪಣೆ: ಚಂಬಾ)

ಒಂದಾನೊಂದು ಕಾಲ, ಒಂದಾನೊಂದು ಊರು. ಅಲ್ಲಿ ಹಲವಾರು ಶಾಸ್ತ್ರಗಳನ್ನು ತಿಳಿದಿದ್ದ ಒಬ್ಬ ಮಹಾ ಪಂಡಿತರು. ಇವರ ಉದ್ಯೋಗ ಅನೇಕ ಶಿಷ್ಯರಿಗೆ ವಿದ್ಯೆ ಕಲಿಸುವುದು. ಈ ವಿದ್ಯಾ ಗುರುವಿಗೆ ಶಿಷ್ಯರಲ್ಲಿ ಅಪಾರ ಪ್ರೀತಿ. ಊರಿನ ಜನರಿಗೆ ಈ ಪಂಡಿತರ ಬಗೆಗೆ ಅಪಾರ ಗೌರವ.

ಈ ಪಂಡಿತರಿಗೆ ಮಾನವ ಜನ್ಮ ದೊಡ್ಡದು ಎನ್ನುವ ಮಾತಿನಲ್ಲಿ ಪರಮ ವಿಶ್ವಾಸ. ಒಂದು ಹೆಜ್ಜೆ ಮುಂದೆ ಹೋಗಿ ಮಾನವ ಜನ್ಮವಷ್ಟೇ ದೊಡ್ಡದು ಎಂದು ಈ ಮಹಾ ಪಂಡಿತರು ಬಲವಾಗಿ ನಂಬಿದ್ದರು.

ಮೇಷ್ಟರ ಕೆಲಸ. ಹೇಳುವುದೇನಿದೆ? ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಕಾಲಚಕ್ರ ಉರುಳಿತು. ಪಂಡಿತರಿಗೆ ವಯಸ್ಸಾಯಿತು. ಸಾವಿನ ಸಮಯವೂ ಹತ್ತಿರವಾಯಿತು.

ಒಂದಾನೊಂದು ಕಾಲ - ಈ ಮಹಾಪಂಡಿತರಿಗೆ ಮುಂದೆ ಏನಾಗುತ್ತದೆ ಎಂದು ತಿಳಿದುಕೊಳ್ಳುವ ದಿವ್ಯದೃಷ್ಟಿಯೂ ಇತ್ತು. ಒಂದು ದಿನ ಈ ವಿಶೇಷ ಶಕ್ತಿಯನ್ನು ಉಪಯೋಗಿಸಿದಾಗ - ಅವರು ಇನ್ನು ಒಂದು ವಾರದಲ್ಲಿ ಸಾಯಲಿದ್ದಾರೆ, ಮುಂದಿನ ಜನ್ಮದಲ್ಲಿ ಒಂದು ಹಂದಿಯಾಗಿ ಹುಟ್ಟಲಿದ್ದಾರೆ ಎನ್ನುವುದು ತಿಳಿಯಿತು.

ಪಂಡಿತರಿಗೆ ಬಹಳ ದುಃಖ ನಿರಾಶೆಯಾಯಿತು. ಆದರೆ ವಿಧಿ ಬರಹವನ್ನು ಅಳಿಸಲು ಸಾಧ್ಯವೇ? ಪಂಡಿತರು ಯೋಚಿಸಿದರು. ಒಂದು ನಿರ್ಧಾರಕ್ಕೆ ಬಂದರು.

ತಮ್ಮ ಆಪ್ತ ಶಿಷ್ಯನನ್ನು ಕರೆದು ವಿಷಯ ತಿಳಿಸಿ - 'ನೋಡು ಆ ರಾಚಯ್ಯನ ಮನೆಯ ಹಂದಿಗೆ ಇನ್ನು ಒಂದು ವಾರದಲ್ಲಿ ಐದು ಮರಿಗಳು ಹುಟ್ಟುತ್ತವೆ. ಆ ಮರಿಗಳಲ್ಲಿ ಒಂದರ ಕಣ್ಣಿನ ಮೇಲೆ ಒಂದು ಬಿಳಿ ಚುಕ್ಕಿ ಇರುತ್ತದೆ. ಅದೇ ನನ್ನ ಮುಂದಿನ ಜನ್ಮ. ಆ ಮರಿಯನ್ನು ಅದು ಹುಟ್ಟಿದ ಎಂಟನೆಯ ದಿನವೇ ಕೊಂದುಹಾಕು. ನಾನು ಹಂದಿ ಜನ್ಮದಲ್ಲಿ ಹೆಚ್ಚು ದಿನ ಇರುಕ್ಕೆ ಇಷ್ಟಪಡುಲ್ಲ. ಈ ವಿಷಯ ಇನ್ನು ಯಾರ ಹತ್ತಿರವೂ ಹೇಳಬೇಡ' ಎಂದು ಕೇಳಿಕೊಂಡರು.

ಶಿಷ್ಯನಿಗೆ ತುಂಬಾ ಬೇಜಾರಾಯಿತು. ಆದರೂ ಗುರುವಿನ ಮಾತುಗಳನ್ನು ಪಾಲಿಸುವುದಕ್ಕಾಗಿ ವಚನ ಕೊಟ್ಟ. ಗುರುಗಳು ಹೇಳಿದಂತೆಯೇ ಅವರ ಅಂತ್ಯವಾಯಿತು.

ರಾಚಯ್ಯನ ಮನೆಯಲ್ಲಿ ಒಂದು ಕಣ್ಣಿನ ಮೇಲೆ ಬಿಳಿ ಚುಕ್ಕಿ ಇದ್ದ ಹಂದಿಮರಿಯೂ ಹುಟ್ಟಿತು.

ಮಾತು ಕೊಟ್ಟಂತೆ ಶಿಷ್ಯ ಹಂದಿಮರಿಯನ್ನು ಮುಗಿಸಲು ಹೋದ. ಇವನ ಕತ್ತಿಯನ್ನು ನೋಡಿದ ತಕ್ಷಣ ಹಂದಿಮರಿ ಮನುಷ್ಯ ಭಾಷೆಯಲ್ಲಿ ಹೇಳಿತು: 'ಶಿಷ್ಯ ಈಗ ನನ್ನನ್ನು ಕೊಲ್ಲಬೇಡ. ನನಗೆ ಈ ಬಾಳೇ ತುಂಬಾ ಇಷ್ಟವಾಗಿದೆ. ಇಲ್ಲಿ ತಿನ್ನುವುದು ತಿರುಗುವುದು ಬಿಟ್ಟರೆ ಇನ್ನೇನೂ ಕೆಲಸವಿಲ್ಲ. ಅದರಲ್ಲೂ ಮುಖ್ಯವಾಗಿ ದಡ್ಡ ಹುಡುಗರಿಗೆ ಪಾಠ ಹೇಳಿಕೊಡಬೇಕಾಗಿಲ್ಲ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು.'

ಸೂಚನೆ

ಅಪರಂಜಿ ಪತ್ರಿಕೆಯನ್ನು ಕುರಿತ ಎಲ್ಲ ವಿವರಗಳು, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವುದು, ಎರಡು ಪ್ರತಿಗಳ ಬಟವಾಡೆ ಮತ್ತು ಇನ್ನಾವುದೇ ಮಾಹಿತಿಗಾಗಿ ದಯವಿಟ್ಟು ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಇವರನ್ನು ಸಂಪರ್ಕಿಸಬೇಕಾಗಿ ಮನವಿ. ಶ್ರೀಯುತ ರಾಮಮೂರ್ತಿಯವರ ವಿಳಾಸ ಇಂತಿದೆ.

ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, ''ಸುಕೇಶವ'' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 076.
ದೂರವಾಣಿ (ದೂರು ವಾಣಿ?): 26688488,
ಮೊಬೈಲ್: 9886061400
ಈಮೇಯ್ಲ್: beluruRamamurthy@hotmail.com

ಪತ್ರಿಕೆಗೆ ಕಳುಹಿಸುವ ಲೇಖನಗಳು ಹಾಗೂ ಚಂದಾ ಹಣ ಇವುಗಳನ್ನು ಎಂದಿನಂತೆ ನಮ್ಮ ಕಛೇರಿಯ ವಿಳಾಸಕ್ಕೇ ಕಳುಹಿಸಿರೆಂದು ವಿನಂತಿ. ಲೇಖನಗಳು ನುಡಿ ಅಥವಾ ಬರಹ ಫಾರ್ಮ್ಯಾಟಿನಲ್ಲಿದ್ದರೆ, ಅವುಗಳನ್ನು ನೇರವಾಗಿ aparanji@hotmail.com ವಿಳಾಸಕ್ಕೆ email ಮಾಡಬಹುದು.

ಈ ನಿಟ್ಟಿನಲ್ಲಿ ಎಲ್ಲ ಬರಹಗಾರರ, ಹಾಗೂ ಓದುಗರ ಸಹಕಾರವನ್ನು ಬೇಡುತ್ತೇವೆ.

ವಿದ್ಯಮಾನಗಳು

– ಶು.ಶ.

ಬ್ರಿಟನ್ನಿಗೆ ಹೋಗಿ ಬಂದಿದ್ದ ಒಬ್ಬ ಸ್ನೇಹಿತರು ಅಲ್ಲಿ ಯಾವಾಗಲೂ ಮಳೆ ಇಲ್ಲ ಮಂಜು, ಡಲ್ಲೋಡಲ್ಲೂ ಎಂದು ಹೇಳಿದ್ದರು. ಈಚಿನ ಅಲ್ಲಿನ ಎಲೆಕ್ಷನ್ ನೋಡಿದಾಗ ಅಲ್ಲಿ ಬರೀ ಹವಾಮಾನವಲ್ಲ ಎಲ್ಲವೂ ಮಂಕೇನೋ ಅನ್ನಿಸುತ್ತೆ.

ಒಂದು ದಿನ ಟೋನಿ ಬ್ಲೇರ್ ಇನ್ನೊಂದು ತಿಂಗಳಿಗೆ ಚುನಾವಣೆ ಎಂದರು. ನಮ್ಮಲ್ಲಾಗಿದ್ದರೆ 'ಇದು ಬಿಲ್‌ಕುಲ್ ಸಾಧ್ಯವಿಲ್ಲ, ವೋಟರ್ಸ್ ಲಿಸ್ಟ್ ಅಪ್‌ಡೇಟ್ ಮಾಡಬೇಕು, ಪ್ಯಾರಮಿಲಿಟರಿ ಫೋರ್ಸ್ ಗುಡ್ಡೆ ಹಾಕಬೇಕು ಅದು - ಇದು, ಸಿದ್ಧತೆಗೆ ಐದಾರು ತಿಂಗಳಾದರೂ ಬೇಕು' ಎಂದು ಚುನಾವಣೆ ಕಮೀಷನ್ ಹೇಳುತ್ತಿತ್ತು. ಅಲ್ಲಿ ನೋಡಿ ಚುನಾವಣೆ ನಡೆಸೋರು ಎಂಥ ಮಂಕುಜನ. ಪ್ರಧಾನಿ ಹೇಳಿದ ತಾರೀಖಿಗೆ ಸುಮ್ಮನೆ ತಥಾಸ್ತು ಅಂದರು. ಸರಿ ಇಂತಹ ದಿನ ಚುನಾವಣೆ ಎಂದ ಮೇಲೆ ಅಲ್ಲಿಯ ದೊಡ್ಡ ದೊಡ್ಡ ನಾಯಕರು ಆ ಪಾರ್ಟಿಯಿಂದ ಈ ಪಾರ್ಟಿಗೆ ಚಂಗನೆ ನೆಗೆದರೆ? ಚಿಲ್ಲಾರಿ ನಾಯಕರುಗಳು ಅಲ್ಲಿಂದಿಲ್ಲಿಗೆ ಕುಪ್ಪಳಿಸಿದರೆ? ಕೇಳಬೇಡಿ. ಅದೂ ಹೋಗಲಿ ಎಂದರೆ ಚುನಾವಣೆ ಪ್ರಚಾರ ಸಭೆಗಳಲ್ಲಿ ಅಂಬರೀಷ್, ಗೋವಿಂದಗಳೇ? ಹೇಮಮಾಲಿನಿ, ಜಯಪ್ರದಗಳೇ? ಯಾರೂ ಇಲ್ಲ, ಬರೀ ನೀರಸ ಭಾಷಣಗಳು. ಎಲೆಕ್ಷನ್ ಹಿಂದಿನ ರಾತ್ರಿ - ಹಣ? ಸೀರೆ? ಕಂಟ್ರಿ ಪೌಚ್? ಕಡೆಗೆ ಬಾಡೂಟ? ಕೇಳಲೇಬೇಡಿ. ಮತದಾನದ ದಿವಸ ನಕಲಿ ವೋಟರುಗಳು? ಬೂತ್ ಕ್ಯಾಪ್ಚರಿಂಗ್? ಫೈರಿಂಗ್? ಲಾಠಿಚಾರ್ಜ್? ಸುದ್ದಿಯೇ ಇಲ್ಲ. ಸರಿ ಹಾಕಿದ ವೋಟುಗಳನ್ನು ಭದ್ರವಾಗಿ ಕಟ್ಟಿಟ್ಟು ಅದು ಮೂರುವಾರ ಕಳಿತ ಮೇಲೆ ಎಣಿಸಬೇಕು ಎನ್ನುವ ಭಾರತೀಯ ಸಿಸ್‌ಡಂ ಬೇಡವೇ? ವೋಟು ಹಾಕಿದ ದಿನವೇ ಎಣಿಸುವ ಆತುರ. ಐದು ವರ್ಷಕ್ಕೆ ಒಂದು ಚುನಾವಣೆ ಬರುತ್ತೆ. ಅದನ್ನು ಆದಷ್ಟೂ ದಿನ ಎಂಜಾಯ್ ಮಾಡಬೇಕು ಅನ್ನೋ ಬುದ್ಧಿಯೇ ಇಲ್ಲ. ಎಂತಹ ಮಂಕು ದೇಶ, ಮಂಕುಜನ?

★★★

ಇಪ್ಪತ್ತು ವರ್ಷಗಳ ಹಿಂದೆ ಜನರಲ್ ಜಿಯಾ ಭಾರತ - ಪಾಕಿಸ್ತಾನ್ ಕ್ರಿಕೆಟ್ ಪಂದ್ಯ ನೋಡಲು ಬಂದಿದ್ದರು. ಈಗ ಮತ್ತೆ ಮುಷಾರಫ್ ಅತ್ತು ಕರೆದು ಕ್ರಿಕೆಟ್ ಪಂದ್ಯದ ಔತಣಕ್ಕೆ ಹೇಳಿಸಿಕೊಂಡಾಗ ಚರಿತ್ರೆ ಮರುಕಳಿಸುತ್ತದೆ - ಎರಡನೆಯ ಬಾರಿ ಒಂದು ಕೆಟ್ಟನಾಯಕನಂತೆ ಎನ್ನುವ ವಾಕ್ಯ ಜ್ಞಾಪಕಕ್ಕೆ ಬಂದಿತು. ಅವರು ಬಂದರು, ಅವರು ನೋಡಿದರು, ಸರಿ. ಆದರೆ ನಾನು ಗೆದ್ದೆ ಎನ್ನುವ ಬದಲು ಈಗ ನನ್ನ ಹೃದಯ ಪರಿವರ್ತನೆಯಾಗಿದೆ ಎಂದರು (ಗಮನಿಸಿ - ಜನರಲ್ಲುಗಳಿಗೂ ಹೃದಯವಿರುತ್ತದೆ.) ನಮ್ಮ ಮಾಧ್ಯಮಗಳು ಮುಷರಫ್ ನಿಲುವಿನಲ್ಲಿ 180 ಡಿಗ್ರಿ ತಿರುವು ಎಂದು ಹೇಳಿದವು.

ಸೆಪ್ಟೆಂಬರ್ 11ರ ಆ ಚಾರಿತ್ರಿಕ ದಿನದಿಂದ ಮುಷರಫರ ಇಂತಹುದೇ 180 ಡಿಗ್ರಿ ತಿರುವನ್ನು ಮಾಧ್ಯಮಗಳು ಅನೇಕ ಬಾರಿ ವರದಿ ಮಾಡಿವೆ. ಒಂದು ಬಾರಿ 180 ಡಿಗ್ರಿ ತಿರುಗಿದ ಮೇಲೆ ಮತ್ತೆ 180 ಡಿಗ್ರಿ ತಿರುಗಿದರೆ ಮೊದಲಿದ್ದ ಜಾಗಕ್ಕೇ ಬಂದ ಹಾಗೇ ಎನ್ನುವ ಸರಳ ಸತ್ಯ ಏನೋ ಮಾಧ್ಯಮಗಳಿಗೆ ಮರೆತು ಹೋಗುತ್ತದೆ.

★★★

ಶ್ರೀಮಾನ್ ಹರದನಹಳ್ಳಿಯವರ್ ಅವರ ಕೃಪಾಕಟಾಕ್ಷದಿಂದ ಒಂದೂವರೆ ತಿಂಗಳಿಂದ ಕಬಳಿಕೆ ಪದ ಪ್ರತಿದಿನ ಪತ್ರಿಕೆಗಳ ಹೆಡ್‌ಲೈನ್ಸ್ ಕಬಳಿಸುತ್ತಿದೆ. ಈ ನಡುವೆ ಯಾರೋ ಕಾಂಗ್ರೆಸಿಗರು - ಕಬಳಿಕೆ ಎಂದರೇನ್ರೀ??? ಎಂದು ಮೂರು ಕ್ವೆಶ್ಚನ್ ಮಾರ್ಕ್ ಹಾಕೋವಷ್ಟು ಕೋಪದಿಂದ ಕೇಳಿದ್ದಾರೆ. ನಾನು ಕುತೂಹಲದಿಂದ ಅರ್ಥಕೋಶ ನೋಡಿದರೆ - ಕಬಳ=ತುತ್ತು, ಕಬಳಿಸು=ನುಂಗು ಎನ್ನುವ ಅರ್ಥವಿದೆ. ಅನರ್ಥಕೋಶ ಅಪ್‌ಡೇಟ್ ಮಾಡಿದ್ದಿದ್ದರೆ ಕಬಳಿಕೆ-ಕಬಳಿಕೆ=ಕ ಅಕ್ಷರದ (ಬಹು) ಬಳಕೆ; ಉ. ಏಕ್ತಾ ಕಪೂರ್ ಸೀರಿಯಲ್ಲುಗಳು ಎಂದು ಸೇರಿಸಬಹುದಾಗಿತ್ತೇನೋ. ದಿನಕ್ಕೊಂದು ಅನಿರೀಕ್ಷಿತ ತಿರುವು, ಎಳೆದಷ್ಟೂ ದೂರ ಹೋಗುವುದು ಈ ಗುಣಗಳಲ್ಲಿ ಭೂ ಕಬಳಿಕೆ ಪ್ರಕರಣ ಎಲ್ಲಾ ಮೆಗಾ ಧಾರಾವಾಹಿಗಳನ್ನು ಮೀರಿಸುವಂತೆ ಕಾಣುತ್ತಿದೆ. ಪಾಪ ನಾಯಕರುಗಳು 5-10 ಎಕರೆ ಜಮೀನು ಕಳೆದುಕೊಂಡ ನೂರಾರು ಬಡವರಿಗಾಗಿ ಹೋರಾಡುತ್ತಿದ್ದಾರೆ. ಈ ಕಬಳಿಕೆ ಪ್ರಕರಣದ ಸೈಡ್ ಎಫೆಕ್ಟ್ ಆಗಿ ಸಾವಿರಾರು ಕಡುಬಡವರಿಗೆ ಅರ್ಕಾವತಿ ಲೇಔಟಿನಲ್ಲಿ 20x30, 30x40 ಸೈಟುಗಳು ಸಿಗೋದು ತಪ್ಪಿದ್ದರೆ ಅವರೇನೂ ಮಾಡುಕ್ಕಾಗುತ್ತೆ? ಡೆಮಾಕ್ರಸಿ ಅಂದರೆ ಕೆಲವರ ಹಿತಕ್ಕಾಗಿ ಅನೇಕರು ತ್ಯಾಗ ಮಾಡೋದು ತಾನೇ?

★★★

ಎಲ್ಲಾ ಮೆಗಾ ಸೀರಿಯಲ್ಲುಗಳೂ ತಿರುಗುವುದು ಸ್ತ್ರೀಯರ ಸುತ್ತಾ ಎನ್ನುವುದು ನಿಮಗೂ ಗೊತ್ತು. ಇಂದಿನ ಧಾರಾವಾಹಿಗಳ ಬಗೆಗೆ ಹೆಚ್ಚು ತಿಳಿದವರು ಇವುಗಳಲ್ಲಿರುವುದು ಎರಡೇ ತರಹದ ಮಹಿಳೆಯರು, ಮೆಜಾರಟಿ ಅಳುಬುರುಕಿಯರು ಅಲ್ಲಲ್ಲಿ ಕೆಲವರು ಜಗಳಗಂಟಿಯರು ಎಂದು ಹೇಳಿದ್ದಾರೆ. ಕನ್ನಡದ ಒಬ್ಬ ಜಾಣ ನಿರ್ದೇಶಕರು ಈ ಸತ್ಯವನ್ನು ಅರಿತೋ ಏನೋ ಅಳುಬುರುಕಿಯರನ್ನು ಜಗಳಗಂಟಿಯರನ್ನಾಗಿ ಮಾಡುವ ಹೊಸ ಥೀಮಿನ ಸೀರಿಯಲ್ಲು ಪ್ರಾರಂಭಿಸಿದರು. ಇದು ಅದೇ ಸಮಯದಲ್ಲಿ ಇನ್ನೊಂದು ಚಾನಲ್ಲಿನಲ್ಲಿ ಎನಗೆ ಸಮಾನರಾರಿವರು ಎಂದು ಮೂರು ವರ್ಷದಿಂದ ಮೀಸೆ ತಿರುಗಿಸುತ್ತಿದ್ದ ಸೀರಿಯಲ್ ಬೇರೆ ಜಾಗ ಹುಡುಕಿಕೊಳ್ಳುವಂತೆ ಮಾಡುವಷ್ಟು ಯಶಸ್ವಿಯಾಗಿದೆಯಂತೆ. ಜ.ಯರನ್ನು ಜ.ಯರು ಎಂದು ಕರೆದಿದ್ದು ತಪ್ಪು ಎಂದು ಕೆಲವು ಜ.ಯರು ಜಗಳ ತೆಗೆದಿದ್ದು ಇದರ ಟಿ.ಆರ್.ಪಿ.ಯನ್ನು ಮೇಲಕ್ಕೇರಿಸಿದೆಯಂತೆ! ಹೇಗಿದೆ ನೋಡಿ ಟೀವೀ ಪ್ರಪಂಚ.

★★★

'ನಂಬಿ ಕೆಟ್ಟವರಿಲ್ಲ' - ಒಂದು ಹೊಸ ವ್ಯಾಖ್ಯೆ

- ಎಚ್.ವಿ. ವಿಶ್ವನಾಥ

ಅಂಕಿ-ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಗಣಿತದ ಒಂದು ಅತ್ಯಂತ ಉಪಯುಕ್ತ ಶಾಖೆ. ಇದು ಶಾಸೂ ವೇಗವಾಗಿ ಬೆಳೆಯುತ್ತ ವಿಜ್ಞಾನದ ಇತರ ಶಾಖೆಗಳೂ ಬೆಳೆಯಲು ಕಾರಣವಾಗುತ್ತಿದೆ. ಒಂದು ರೀತಿಯಲ್ಲಿ, ಮಾನವ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಭಾಗವೂ ಇದರಿಂದ ಪ್ರಯೋಜನ ಪಡೆಯುತ್ತಿದೆ. ಅದರಲ್ಲೂ ಸಂಭವನೀಯತೆಯ ಸಿದ್ಧಾಂತ (Theory of Probability) ಎಂಬುದು ಇದರ ಒಂದು ಪ್ರಮುಖ ಅಂಗ. ಜೀವ, ಭೌತ, ರಸಾಯನ, ಭೂಗೋಳ, ಖಗೋಳ, ಮಾನಸಿಕ, ಶಾರೀರಿಕ ಹೀಗೆ ಎಲ್ಲ ರಂಗಗಳಲ್ಲೂ ಅಂಕಿ-ಸಂಖ್ಯಾಶಾಸ್ತ್ರದ ಅನ್ವಯದಿಂದ ಸಂಶೋಧನೆಗಳು ನಡೆಯುತ್ತಿವೆ. ಬೇರೆ ಯಾವ ವಿಧಾನದಿಂದ ತಿಳಿಯಲು, ಕಂಡುಹಿಡಿಯಲು ಅಸಾಧ್ಯವಾಗಿದ್ದ ಎಷ್ಟೋ ವಿಚಾರಗಳನ್ನು ಈಚೀಚೆಗೆ ಈ ಶಾಸ್ತ್ರದ ಆಧಾರದಿಂದ ತಿಳಿದುಕೊಳ್ಳುತ್ತಿದ್ದಾರೆ. ಜೊತೆಗೆ, ಈಚಿನ ಕಂಪ್ಯೂಟರ್ ಕ್ರಾಂತಿಯಿಂದಲೂ ಈ ರಂಗದ ಬೆಳವಣಿಗೆಗೆ ಪ್ರಚೋದನೆ ದೊರಕಿದೆ.

ಅಂಕಿ-ಅಂಶ ಸಂಬಂಧಿತ ಸಂಶೋಧನೆಗಳನ್ನು ಹೇಗೆ ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದು ನಮಗೆಲ್ಲ ಗೊತ್ತಿರುವುದೇ. ಉದಾಹರಣೆಗೆ, ಯಾವ ರಾಜ್ಯದ ಯಾವ ಹಳ್ಳಿಯ ಯಾವ ಕೊಂಪೆಯಲ್ಲಿ ಯಾವ ಧರ್ಮದ, ಯಾವ ಜಾತಿ-ಉಪಜಾತಿ-ಪಂಗಡ-ಕುಲ-ಮನೆತನ-ಭಾಷೆಯ ಎಷ್ಟು ಜನ ವಾಸಿಸುತ್ತಿದ್ದಾರೆ ಎಂಬ ಅಂಕಿ-ಅಂಶಗಳು ಚುನಾವಣೆಗೆ ನಿಂತ ರಾಜಕಾರಣಿಗಳಿಗೆ ಅತ್ಯುಪಯುಕ್ತ. ದೇಶದ ಯಾವ ಭಾಗದಲ್ಲಿ ಯಾವ ವರ್ಷ ಎಷ್ಟೆಷ್ಟು ಮಳೆಹನಿಗಳು ಬಿದ್ದಿದ್ದವು ಎಂಬ ವಿವರಗಳು ನದೀವಿವಾದಕ್ಕೆ ಕಾವೇರಿದಾಗಲೆಲ್ಲ ಬೇಕಾಗುತ್ತವೆ. ಇಂದು ಯಾವುದೇ ಸಿದ್ಧಾಂತವನ್ನು ಮಂಡಿಸಿ ಬುದ್ಧಿವಂತನೆನಿಸಲು, ಇಲ್ಲವೆ ಖಂಡಿಸಿ ರಾದ್ಧಾಂತ ಮಾಡಲು ಬೇಕಾದುದು ಅಂಕಿ-ಅಂಶ. ಕುದುರೆ ಜೂಜಿನಲ್ಲಾಗಲಿ, (ಚುನಾವಣೆ ಮುಗಿದ ಮೇಲೆ ಅವುಗಳ) ವ್ಯಾಪಾರದಲ್ಲಾಗಲಿ ತೊಡಗಿದವರಿಗೆ ಅಂಕಿಗಳೇ ಜೀವ. ಇನ್ನು ಒಂದಂಕಿ ಲಾಟರಿ ಪ್ರಿಯರನ್ನು ಬಿಡಿ! ನಿಜಕ್ಕೂ ಜನಜೀವನದಲ್ಲಿ ಇವುಗಳ ಪಾತ್ರ ಮಹತ್ತರವಾದುದೇ. ಸಿಇಟಿ ಪರೀಕ್ಷೆ ಇಲ್ಲವೆ ಚುನಾವಣಾ ಫಲಿತಾಂಶದ, ಅಥವಾ ಕ್ರಿಕೆಟ್ಟು ಕಾಲಗಳನ್ನು ನೆನಪಿಸಿಕೊಳ್ಳಿ: ಎಷ್ಟಕ್ಕೆ ಎಷ್ಟರಿಂದ ಎಷ್ಟರಲ್ಲಿ ಎಷ್ಟಾಗಿ ಎಷ್ಟು ಸೇರಿ ಎಷ್ಟು ಕಳೆದದ್ದರಿಂದ ಎಷ್ಟಳಿದು ಎಷ್ಟುಳಿಯಿತು ಎಂಬ ಲೆಕ್ಕಾಚಾರವೇ ನಮ್ಮ ಮೈ ಮನ ಧಮನಿಗಳಲ್ಲೆಲ್ಲ ಸೇರಿಕೊಂಡು ನಮ್ಮ ಇಹ-ಪರ-ಗತಿಗಳನ್ನೂ ನಿರ್ಧರಿಸುತ್ತಿರುತ್ತದೆ. ಹಾಗೆಯೇ ಯಾರ್ಯಾರ ಮನೆಯಲ್ಲಿ ಯಾವ್ಯಾವ ಹೊತ್ತಿನಲ್ಲಿ ಯಾವ್ಯಾವ ಟೀವಿ ಧಾರಾವಾಹಿ ನೋಡುತ್ತಾರೆ, ಯಾವ್ಯಾವ ಬ್ರಾಂಡಿನ ಕಾಫಿಪುಡಿ, ಚಟ್ನಿಪುಡಿ, ಹಲ್ಲುಡಿ, ಪಾತ್ರೆಪುಡಿ, ಸೋಪುಪುಡಿಗಳನ್ನು ಬಳಸುತ್ತಾರೆ ಎಂಬಂತಹ ಸಾವಿರಾರು, ಲಕ್ಷಾಂತರ

ಅಂಕಿ-ಸಂಖ್ಯೆಗಳನ್ನು ಕಲೆಹಾಕಿ, ಅದನ್ನು ಕೂಡಿಸಿ ಕಳೆದು ಗುಣಿಸಿ ಭಾಗಿಸಿ, ಮಹಾಜನರ ಜೀವನ ಕ್ರಮಗಳ ಬಗ್ಗೆ ನೂರಾರು ಸಿದ್ಧಾಂತಗಳನ್ನು ಕಲ್ಪಿಸುತ್ತಾರೆ: ಮತ್ತು ಯಾವ ಹೊಸ ಉತ್ಪನ್ನವನ್ನು ಹೊರತಂದರೆ ಎಷ್ಟು ವ್ಯಾಪಾರವಾದೀತು, ಎಷ್ಟು ಲಾಭ ಬಂದೀತು ಎಂಬ ಲೆಕ್ಕಾಚಾರ ಹಾಕುತ್ತಲೇ ಇರುತ್ತಾರೆ.

ಇದೆಲ್ಲ ಒಂದು ಬಗೆಯಾದರೆ, ಸಂಭವನೀಯತೆಯ ಸಿದ್ಧಾಂತದ ಉಪಯೋಗ ಇನ್ನೊಂದು ಬಗೆ. 'ನಮ್ಮ ಹುಡುಗನ ಶಾಲೆಯಲ್ಲಿ ಕಳೆದ ನಾಲ್ಕು ವರ್ಷದಿಂದಲೂ ಎಸ್ಸೆಸ್ಸೆಲ್ಸಿಯಲ್ಲಿ ಶೇ. 100 ರಷ್ಟು ಫಲಿತಾಂಶ ಬರುತ್ತಲೇ ಇದೆ; ಆದ್ದರಿಂದ ನಮ್ಮ ಹುಡುಗನೂ ಈ ವರ್ಷ ಪಾಸಾಗಲೇ ಬೇಕು'' ಎಂದು ಕೆಲವರು ನಂಬಿಕೊಳ್ಳುವುದಕ್ಕೆ ಆಧಾರ ಈ ಸಿದ್ಧಾಂತವೇ. ಹಾಗೆಯೇ ತಮಗೆ ಹಿಂದಿನ ಮೂರು ಮಕ್ಕಳೂ ಹೆಣ್ಣೇ ಆಗಿರುವುದರಿಂದ ಈ ಬಾರಿ ಗಂಡಾಗಲೇಬೇಕು ಎಂದು ಕೆಲವರು ಊಹಿಸುವುದಕ್ಕೂ ಅದೇ ಆಧಾರ. ಹೀಗೆ ಅಂಕಿ-ಸಂಖ್ಯಾಶಾಸ್ತ್ರದ ಮಹತ್ತು ಮಹನತ್ತು ಎತ್ತೆತ್ತಲೂ ಎತ್ತೆತ್ತರಕ್ಕೆ ಏರುತ್ತಿರುವುದು ಸತ್ಯವೇ. ಆದರೆ ಇದರ ಅಪಾಯಗಳನ್ನು ಮನಗಂಡು ಈ ವಿಧಾನದ ಇತಿಮಿತಿಗಳನ್ನೂ ಅಪಾಯಗಳನ್ನೂ ಎತ್ತಿ ಒತ್ತಿ ಹೇಳುವವರ ಸಂಖ್ಯೆಯೂ ಒಂದು ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಸುಳ್ಳಲ್ಲ. ಅದನ್ನು ಪ್ರತಿಬಿಂಬಿಸುವಂತಹ ಗಾದೆಗಳೇ ಎಷ್ಟೋ ಹುಟ್ಟಿಕೊಂಡಿವೆ. ಕೈಯಲ್ಲಿ ಒಂದಷ್ಟು ಅಂಕಿ-ಅಂಶ, ತಲೆಯಲ್ಲಿ ಶಕುನಿಬುದ್ಧಿ ಇವೆರಡು ಇದ್ದುಬಿಟ್ಟರೆ ಬೇಕಾದ ಸಿದ್ಧಾಂತವನ್ನು (ಎಂದರೆ ಪರಸ್ಪರ ವಿರುದ್ಧವಾದ ಸಿದ್ಧಾಂತವನ್ನು ಕೂಡ!) ಸಾಬೀತು ಮಾಡಿಬಿಡಬಹುದು ಎಂಬ ಸಿದ್ಧಾಂತವೇ ಇದೆ. ಇಂಥ ವಿಪರೀತ ಬುದ್ಧಿಯ ಪ್ರಚಂಡರ ಮುಂದೆ ಬಾಯಿ ಕಟ್ಟಿ ಸೋತುಹೋದವರ ಪ್ರಕಾರ, ಸುಳ್ಳುಗಳಲ್ಲಿ ಮೂರು ವರ್ಗಗಳುಂಟು: (1) ಸುಳ್ಳುಗಳು, (2) ಕೆಟ್ಟ-ದುಷ್ಟ-ಅನಿಷ್ಟ-ಸುಸ್ಪಷ್ಟ-ಪಾಪಿಷ್ಟ ಸುಳ್ಳುಗಳು, ಹಾಗೂ (3) ಅಂಕಿ-ಅಂಶಗಳು. (ಇಂಗ್ಲಿಷಿನಲ್ಲಿ ಸರಳವಾಗಿ Lies, Damned Lies, and Statistics ಎನ್ನುತ್ತಾರೆ.) ಜನಗಳಲ್ಲಿ, ಅಂಕಿ-ಅಂಶವೆಂದರೆ ಸತ್ಯದ ಅಪರಾವತಾರವೆಂದೇ ಕಲ್ಪನೆ; ಹಾಗಿರುವಾಗ, ಅದನ್ನು ಇಂಥ ಸ್ಥಾನಕ್ಕೆ ಇಳಿಸುವುದನ್ನು ಕಂಡು ಎಷ್ಟೋ ಸರಳಸತ್ಯಪ್ರಿಯರು ತಬ್ಬಿಬ್ಬಾಗಬಹುದು. ಆದರೆ ಯಾರೂ ಎಂದೂ ತಥ್ಯವೆಂದು ಒಪ್ಪಲಾಗದ ವಿಚಾರವನ್ನು ಕೂಡ 'ಸತ್ಯದ ತಲೆಯ ಮೇಲೆ ಹೊಡೆದಂತೆ'' ಮಂಡಿಸುವ ಶಕ್ತಿ ಕೆಲವರಿಗೆ ಇರುತ್ತದೆ. ಅಂಥವರನ್ನು ನೋಡಿದಾಗ ಇದು ಮನವರಿಕೆಯಾಗುತ್ತದೆ.

ಉದಾಹರಣೆಗೆ, ರಸ್ತೆ ಅಪಘಾತಗಳ ಅಂಕಿಸಂಖ್ಯೆಗಳನ್ನೆಲ್ಲ ಪರಿಶೀಲಿಸಿ, ಯಾರೋ ತಜ್ಞರು ಕಂಡುಹಿಡಿದರು: ಒಟ್ಟು ಅಪಘಾತಗಳ ಪೈಕಿ ಶೇಕಡಾ 15ರಷ್ಟಕ್ಕೆ ಕುಡಿದು ಓಡಿಸುವವರೇ ಕಾರಣ ಎಂದು. ಅದನ್ನು ಕೇಳಿದೊಡನೆ ಕುಡುಕನೊಬ್ಬ ತೊದಲಿದನಂತೆ: ''ಹಾ, ನಮಗಿದು ಗೊತ್ತಿತ್ತು! ನೋಡಿ ಎಷ್ಟೊಂದು ಅಪಘಾತಗಳಾಗುತ್ತವಲ್ಲ, ಅದರಲ್ಲಿ ಅತಿ ಹೆಚ್ಚಿನವಕ್ಕೆ ಕುಡುಕರಲ್ಲದವರೇ ಜವಾಬ್ದಾರಿ. ಅವರಿಗೇ ಶಿಕ್ಷೆಯಾಗಬೇಕಾದ್ದು. ಸುಮ್ಮನೆ ನಮ್ಮ ಮೇಲೆ ಆರೋಪ!''

ಸಂಭವನೀಯತೆಯ ಬಗ್ಗೆ ಮತ್ತೊಂದು ಚಟಾಕಿಯನ್ನು ಇಲ್ಲಿ ಹೇಳಬಹುದು: ಶಸ್ತ್ರಚಿಕಿತ್ಸೆಗೆ ಸಿದ್ಧನಾಗಿದ್ದ ರೋಗಿ ಆತಂಕದಿಂದ ಸರ್ಜನರನ್ನು ಕೇಳಿದ: ''ಏನ್ ಡಾಕ್ಟರೇ, ಇದು ಯಶಸ್ವಿ ಆಗುತ್ತದೆಯೇ?''

''ಛೇಛೇ. ಅನುಮಾನವೇನು?''

''ಅಲ್ಲ ಡಾಕ್ಟರೇ, ಇಂಥ ಕೇಸಿನಲ್ಲಿ ಯಶಸ್ಸು ಕಡಿಮೆ ಅನ್ನುತ್ತಾರೆ?''

''ಇರಬೋದ್ರೀ! ಸ್ಟ್ಯಾಟಿಸ್ಟಿಕ್ಸ್ ಪ್ರಕಾರ, ಹತ್ತರಲ್ಲಿ ಒಂದು ಕೇಸಿನಲ್ಲಿ ಮಾತ್ರವೇ ರೋಗಿ ಉಳಿಯೋದು. ಆದರೆ ನಿಮ್ಮ ಅದೃಷ್ಟ ನೋಡಿ! ನಿಮ್ಮದೇ ನಾನು ಮಾಡುತ್ತಿರುವ ಹತ್ತನೇ ಆಪರೇಷನ್ನು. ಇದುವರೆಗಿನ ಒಂಬತ್ತು ಜನರೂ ತೀರಿಕೊಂಡರು. ನೀವೇ ಹತ್ತನೆಯವರು ಎಂದಮೇಲೆ ನಿಮ್ಮದು ಈಗ ಯಶಸ್ವಿ ಆಗಲೇಬೇಕು, ಅಲ್ಲವೆ?''

ಡಾಕ್ಟರು ಹೀಗೆಂದಮೇಲೆ ಶಸ್ತ್ರ ಚಿಕಿತ್ಸೆ ಮಾಡುವ ಪ್ರಮೇಯವೇ ಬರಲಿಲ್ಲವಂತೆ!

ಅಂಕಿ-ಸಂಖ್ಯೆಗಳ ವಿಚಾರವನ್ನೆತ್ತಿ ಇದನ್ನೆಲ್ಲ ಏಕೆ ಹೇಳುತ್ತ ಹೋದೆನೆಂದರೆ, ಅವು ಎಷ್ಟು ವ್ಯಾಪಕವಾಗಿ ಬಳಕೆಯಾಗುತ್ತಿವೆ ಮತ್ತು ಅದನ್ನು ಹೇಗೆ ತಪ್ಪಾಗಿ ಅರ್ಥೈಸಲೂ ಸಾಧ್ಯ ಎಂದು ತಿಳಿಸುವುದಕ್ಕೆ ಅಷ್ಟೆ. ನಮ್ಮ ಇಂದಿನ ಹರಿಕಥಾ ಪ್ರಸಂಗದಲ್ಲಿ ಇವೆಲ್ಲ ಉಪಕಥೆಗಳಷ್ಟೇ. ಮುಖ್ಯ ಕಥೆ ಬೇರೆಯೇ ಇದೆ. ಅದು ಹಿಂದೆ ದಿನಪತ್ರಿಕೆಯೊಂದರಲ್ಲಿ ಬಂದಿದ್ದ ಒಂದು ಸಂಪಾದಕೀಯ. ವಿಷಯ ಬಹಳ ಗಹನವಾದದ್ದೇ. ಆಗಾಗ ಬಂದು ಅನೇಕರನ್ನು ಕಾಡಿ ಹೋಗುವ ತೊಂದರೆಗೆ ಸಂಬಂಧಿಸಿದ್ದು: ದೇವರು ಇದ್ದಾನೆಯೆ, ಇಲ್ಲವೆ? ಇಂಗ್ಲಿಷಿನ ಈ ಲೇಖನ ಸ್ವಾರಸ್ಯವಾಗಿದೆ. ಕನ್ನಡದ ಹೆಚ್ಚಿನ ಓದುಗರ ಕಣ್ಣಿಗೆ ಇದು ಬಿದ್ದಿರಲಾರದು, ಅವರಿಗೂ ಅದು ಹಿಡಿಸಬಹುದು ಎಂಬ ನಿರೀಕ್ಷೆಯಿಂದ ಅದನ್ನು ಈ ಕೆಳಗೆ ನೇರವಾಗಿ ಅನುವಾದಿಸಿ ಕೊಡಲಾಗಿದೆ:

ದೇವರ ಮೇಲೆ ಬಾಜಿ (Gamble on God)

ಭಗವದಸ್ತಿತ್ವಕ್ಕೊಂದು ಗಣಿತದ ಪ್ರಮಾಣ

ದೇವರಿದ್ದಾನೆಯೆ ಎಂದು ನೋಡಲು ನಾಣ್ಯವೊಂದನ್ನು ಚಿಮ್ಮಿ ನೋಡೋಣ. ಏಕಾಗಬಾರದು? ಫ್ರೆಂಚ್ ವಿಜ್ಞಾನಿ ಬ್ಲೇಸ್ ಪ್ಯಾಸ್ಕಲ್‌ನ ಅಭಿಪ್ರಾಯ ಇದೇ. 1600 ನೇ ಇಸವಿಯ ಆಸುಪಾಸಿನಲ್ಲಿದ್ದ ಈ ಗಣಿತಜ್ಞ, ಭೌತಜ್ಞ ಹಾಗೂ ತತ್ವಶಾಸ್ತ್ರಜ್ಞನು ಸಂಭವನೀಯತೆಯ ಸಿದ್ಧಾಂತದ ಸಹ - ಅನ್ವೇಷಕ.... ''ಸೃಷ್ಟಿಕರ್ತನೊಬ್ಬ ನಿಜಕ್ಕೂ ಇದ್ದಾನೆ'' ಎಂದು ಒಬ್ಬನು ಬಾಜಿ ಕಟ್ಟಿದರೆ ಅದು ಯಾರೂ ಸೋಲಿಸಲಾಗದಂಥ ಪಣ ಎಂದು ಈತ ವಾದಿಸಿದ. 'ದೇವರ ಅಸ್ತಿತ್ವವನ್ನಾಗಲಿ ನಾಸ್ತಿತ್ವವನ್ನಾಗಲಿ ಸಾಬೀತು ಪಡಿಸಲು ಯಾರಿಂದಲೂ ಸಾಧ್ಯವಿಲ್ಲ; ಆದರೆ, ಒಂದು ವೇಳೆ ಆತ ಇದ್ದದ್ದೇ ಹೌದಾದರೆ, ಆತನನ್ನು ನಂಬುವುದರಲ್ಲಿ ನಮಗಿರುವ ಲಾಭಗಳು ನಂಬದೆ ಇರುವುದರ ಲಾಭ(ನಷ್ಟ?)ಕ್ಕಿಂತ ಎಷ್ಟೋ ಪಾಲು ಮಿಗಿಲು' - ಇದು ಪ್ಯಾಸ್ಕಲನ ವಾದ. ಇದೇ ತರ್ಕದ ಮೇಲೆ ಅವನು ಇನ್ನೂ ಒಂದು ಸಿದ್ಧಾಂತವನ್ನು ಮಂಡಿಸಿದ (ಅದಕ್ಕೆ ಪ್ಯಾಸ್ಕಲನ ಬಾಜಿ ಎಂದೇ ಹೆಸರಾಯಿತು): 'ದೇವರು ಇದ್ದಾನೆ ಎಂದು ಬಾಜಿ ಕಟ್ಟುವುದಾದರೆ ಒಬ್ಬನು ಅದರ


ಮೇಲೆ ತನ್ನ ಸರ್ವಸ್ವವನ್ನೂ ಒತ್ತೆಯಿಡಬಹುದು' ಏಕೆಂದರೆ, ಅವನೇ ಹೇಳುವಂತೆ ಅದು ರಿಸ್ಕೇ ಇಲ್ಲದ ಬಾಜಿ. ಹೇಗೆಂದರೆ, ಒಬ್ಬನು ಆಸ್ತಿಕನಾಗಿರುತ್ತಾನೆ, ಆದರೆ ವಾಸ್ತವವಾಗಿ ದೇವರಿಲ್ಲ ಎನ್ನೋಣ; ಆಗ, ಇಲ್ಲದ ದೇವರನ್ನು ನಂಬಿದವನಿಗೆ ನಷ್ಟವೇನೂ ಇಲ್ಲ! ದೇವರು ನಿಜಕ್ಕೂ ಇದ್ದರೆ ಮಾತ್ರ, ಅವನನ್ನು ಎದುರು ಹಾಕಿಕೊಂಡು ನಾಸ್ತಿಕನಾಗಿರುವುದು ವ್ಯಕ್ತಿಗೆ ಅಷ್ಟು ಕ್ಷೇಮವಲ್ಲ ಅಲ್ಲವೆ? ಶಿಕ್ಷೆಯ ಅಪಾಯ ಇರುತ್ತದಲ್ಲ! ಆದ್ದರಿಂದ ದೇವರಿಲ್ಲ ಎಂದು ವಾದಿಸುವ ದ್ಯೂತದಲ್ಲಿ ಒಬ್ಬನ ಪಾಲಿಗೆ 'ಡ್ರಾ' ಅಥವಾ ಸೋಲು ಕಟ್ಟಿಟ್ಟದ್ದು. ಒಂದೋ ಆತ ಯಾವುದೇ ಲಾಭ ಗಳಿಸುವುದಿಲ್ಲ; ಇಲ್ಲವೆ ಶಾಶ್ವತ ನರಕಕ್ಕೀಡಾಗುತ್ತಾನೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ನಾಸ್ತಿಕನಾಗಿರುವುದು ಮೂರ್ಖತನ ಮತ್ತು ಕನಿಷ್ಠ. ಬಾಜಿಯ ದೃಷ್ಟಿಯಿಂದಲಾದರೂ, 'ನಂಬು'ವುದು ಉತ್ತಮ ಆಯ್ಕೆ.

ಈ 'ಬಾಜಿ'ಯ ಸಿದ್ಧಾಂತದ ಮಂಡನೆ ಮೊದಲು ಆದದ್ದು 17ನೇ ಶತಕದ ಮಧ್ಯದಲ್ಲಿ, ಆಗಿನಿಂದಲೂ ನಾಸ್ತಿಕ್ಯವಾದಿಗಳು ಇದನ್ನು ಉಗ್ರವಾಗಿ ಖಂಡಿಸುತ್ತ ಬಂದಿದ್ದಾರೆ. ಕಾರಣ: ಇದರ ತರ್ಕ ಪೊಳ್ಳಾಗಿದ್ದರೂ ಆಸ್ತಿಕತೆಯನ್ನೇ ಒಪ್ಪುವಂತೆ ಒತ್ತಾಯಪೂರ್ವಕವಾಗಿ ವಾದಿಸುತ್ತದೆ ಎಂದು. ಈಗ ನೋಡಿದರೆ, ಇವರೆಲ್ಲ ಹೀಗೆ ವಾದಿಸಿದ್ದುದು ನಿಷ್ಪ್ರಯೋಜಕ, ಕಡೆಗೆ ಪ್ಯಾಸ್ಕಲ್ ಹೇಳಿದ್ದೇ ಭಾಗಶಃ ನಿಜ ಎಂಬಂತೆ ತೋರುತ್ತಿದೆ. ಏಕೆಂದರೆ, ಇತ್ತೀಚಿನ ಡಾ|| ಸ್ಟೀಫನ್ ಅನ್‌ವಿನ್ ಎಂಬ ಬ್ರಿಟಿಷ್ ಭೌತವಿಜ್ಞಾನಿಯೊಬ್ಬನು ಅಂಕಿ-ಸಂಖ್ಯಾಶಾಸ್ತ್ರದ ಪ್ರಕಾರ ಲೆಕ್ಕ ಹಾಕಿ, ದೇವರು ಇರುವ ಸಾಧ್ಯತೆ, ಮೂರರಲ್ಲಿ ಎರಡರಷ್ಟು (ಶೇಕಡಾ 66.6) ಎಂದು ಹೇಳಿದ್ದಾನೆ. ಆತ 200 ವರ್ಷಗಳಷ್ಟು ಹಿಂದಿನ ಬೇಯ್ಸ್ ಸಿದ್ಧಾಂತವೆಂಬ ಗಣಿತ ಸೂತ್ರವನ್ನು ಅನ್ವಯಿಸಿ, ಮಾನವನ ಇಚ್ಛಾಶಕ್ತಿ, ಪ್ರಾರ್ಥನೆಯ ಪ್ರಭಾವ, ನೈತಿಕ ಬಲದ ಸ್ಥಾನ, ದೇವರ ಸಮದೃಷ್ಟಿ - ಕರುಣಾಮಯತೆಗಳು, ನೈಸರ್ಗಿಕ ವಿಕೋಪಗಳು, ಸಹಜವಾಗಿ ಒದಗುವ ಕಷ್ಟ-ಸುಖಗಳು, ಅಲ್ಲದೆ ದೇವರ ಅಸ್ತಿತ್ವ-ನಾಸ್ತಿತ್ವಗಳನ್ನು ಸಾರುವ ಇತರ ಅನೇಕ ಊಹಾಪೋಹಗಳು ಇವೆಲ್ಲವನ್ನೂ ತಕ್ಕಷ್ಟು ತೂಕದೊಂದಿಗೆ ಕಲಿಸಿ, ಕೂಡಿಸಿ, ಅರೆದು, ಭಟ್ಟಿ ಇಳಿಸಿ ತನ್ನ ಹೊಸ ಸಿದ್ಧಾಂತವನ್ನು ಮುಂದಿಟ್ಟಿದ್ದಾನೆ: ದೇವರಿರುವ ಸಾಧ್ಯತೆ, ಹೆಚ್ಚೇ ಎನ್ನಬಹುದಾದ ಶೇ. 67 ಎಂದು. ಇಷ್ಟೊಂದು ನಿಖರವಾದ ವಿಶ್ಲೇಷಣೆಗೆ ಒಳಗಾದ ಮೇಲೆ ಇನ್ನು ದೇವರಿಗಿರುವುದು ಮೂರೇ ಆಯ್ಕೆಗಳು: (1) ಈ ವಿವರಗಳ ಒಳಗಿನಿಂದ ಆತ, ಮೂರನೇ ಎರಡರಷ್ಟು ಬಹುಮತದಿಂದ ಹೊರಹೊಮ್ಮಿ, ಬಹುಮಹಡಿ ಕಟ್ಟಡದಂತೆ ಬೆಳೆದು ನಿಲ್ಲಬೇಕು - ತನ್ಮೂಲಕ ನಾಸ್ತಿಕರ ಶೂನ್ಯವರ್ಗದ (ನಲ್‌ಸೆಟ್) ಕಲ್ಪನೆಯನ್ನು ಹೊಸಕಿ ಹಾಕಬೇಕು ಮತ್ತು ಅಜ್ಞೇಯತಾವಾದಿಗಳು ಅಡ್ಡಗೋಡೆಯ ಮೇಲೆ ಅತಂತ್ರವಾಗಿ ನಿಲ್ಲಿಸಿದ 50-50 ಸೃಷ್ಟಿಯನ್ನು ಬೀಳಿಸಿಬಿಡಬೇಕು. (2) ಇಲ್ಲವೆ, ಉಳಿದ ಶೇ. 33.3ರ ಅಲ್ಪಸಂಖ್ಯಾತ ಪರಿಮಾಣದೊಳಗೆ ಕರಗಿಹೋಗಿ, ಅವರ ನಂಬಿಕೆಯ ಮೂರರಲ್ಲೊಂದು ಭಾಗವನ್ನು ಹಠಾತ್ತಾಗಿ ಲಯಗೊಳಿಸಿ ಬೆಚ್ಚಿಬೀಳಿಸುವುದು. ಅಥವಾ (3) ಏನೂ ಆಗದೆಯೇ ಇದ್ದವನಂತೆ, ಇರುವಂತೆಯೇ

ಇರುತ್ತಿದ್ದುಬಿಡುವುದು. ಹೀಗಾದರೆ ಮಾತ್ರ, ಅದು ಎಷ್ಟೋ ದೃಷ್ಟಿಗಳಿಂದ ಸಂಪೂರ್ಣ ಸತ್ಯವಾಗುತ್ತದೆ.

ಇದಿಷ್ಟು ಸಂಪಾದಕೀಯದ ಮಾತುಗಳು. ಇಲ್ಲಿ ಹೇಳಲಾದ ವಿಷಯ ಲೋಕಾತೀತವೇ ಆಗಿದ್ದರೂ, ಶೈಲಿಯಿಂದ ಲಘುಬರಹವೆಂಬುದು ಸ್ಪಷ್ಟ... ಆದರೂ ಇದನ್ನೋದಿದ ಪತ್ರಿಕೆ ವಾಚಕರೊಬ್ಬರು ಇದನ್ನು ಗಂಭೀರವಾಗಿ ಪರಿಗಣಿಸಿ ಒಂದು ಪತ್ರ ಬರೆದರು:

"ನೀವು ಅಂಕಿ-ಸಂಖ್ಯೆಯ ಆಧಾರದ ಮೇಲೆ ದೇವರ ಅಸ್ತಿತ್ವವನ್ನು ಎತ್ತಿ ಹಿಡಿಯುವ ಡಾ|| ಸ್ಟೀಫನ್ ಅನ್‌ವಿನ್ನರ ಸಿದ್ಧಾಂತವನ್ನು ಬೆಂಬಲಿಸಿ ಬರೆದಿದ್ದೀರಿ. ಹಾಗಿದ್ದ ಮೇಲೆ ಅದೇ ತರ್ಕದ ಮೂಲಕ, ನೀವು 'ಅವನು' ಎಂದು ಕರೆಯುವ ಆ ವಸ್ತುವಿನ ಲಿಂಗವನ್ನೂ ಪತ್ತೆ ಹಚ್ಚಲು ಸಾಧ್ಯವಿರಬೇಕು. ಅದು 'ಅವಳು' ಇಲ್ಲವೆ 'ಅದು' ಯಾಕಿರಬಾರದು? ಅಷ್ಟೇಕೆ, 'ಅವರುಗಳು' ಕೂಡ ಯಾಕಿರಬಾರದು? ನೋಡಿದಿರಾ? ಸಿದ್ಧ (ಸಾಬೀತು) ಪಡಿಸಿಲ್ಲದ ಅಥವಾ ಸಿದ್ಧಗೊಳಿಸಲು ಆಗದ ಊಹೆಯೊಂದನ್ನು ಬೆಂಬಲಿಸುವ ನಿಮ್ಮ ಯತ್ನದಲ್ಲಿ ಮೂಲದೋಷವಿರುವುದು ಇಲ್ಲಿಯೇ."



ಐ ಡೋಂಟ್ ನೋ ಇಂಡಿ

– ಡಿ. ರಮೇಶ್

ಎಂಭತ್ತರ ದಶಕದಲ್ಲಿ, ಹಲವು ವರುಷಗಳು (ಅಂದಿನ ಪಶ್ಚಿಮ) ಜರ್ಮನಿಯಲ್ಲಿ ಭಾರತ ಸರಕಾರದ ವತಿಯಿಂದ ನನ್ನನ್ನು ಅದೇ ಸರಕಾರದ ಒಂದು ಕಾರ್ಪೊರೇಷನ್ನಿನ ಹೆಡ್ ಆಗಿ ಪೋಸ್ಟ್ ಮಾಡಿದ್ದರು. ನನ್ನ ಕೆಲಸ ಇಂಟರ್ನ್ಯಾಷನಲ್ ಟ್ರೇಡಿಂಗ್ ಅಂದರೆ ಅಂತಾರಾಷ್ಟ್ರೀಯ ವ್ಯಾಪಾರ.

ನಮ್ಮ ಆಫೀಸ್ ಇದ್ದ ಬಿಲ್ಡಿಂಗಿನಲ್ಲೇ ನಮ್ಮ ದೇಶದ ರಾಯಭಾರಿ (ಕಾನ್ಸುಲೇಟ್), ಟ್ರೇಡ್ ಡೆವಲಪ್ಮೆಂಟ್ ಅಥಾರಿಟಿ ಆಫ್ ಇಂಡಿಯ ಮತ್ತು ಟೆಕ್ಸ್‌ಟೈಲ್ಸ್ ಎಕ್ಸ್‌ಪೋರ್ಟ್ ಪ್ರೊಮೋಷನ್ ಕೌನ್ಸಿಲ್ ಎಂಬ ಆಫೀಸುಗಳೂ ಇದ್ದವು. ನಮ್ಮ ಸಂಸ್ಥೆ ಶುದ್ಧ ಕಮರ್ಷಿಯಲ್ ಆದ್ದರಿಂದ ನಮಗೆ ಎಂಟರ್ಟೇನ್ಮೆಂಟ್ ಅಲೋಯನ್ಸ್ ಮಿಕ್ಕ ಆಫೀಸುಗಳಿಗಿಂತ ಹೆಚ್ಚಾಗಿರುತ್ತಿತ್ತು. ಇದರ ಜತೆ ನನ್ನ ಆಫೀಸಿನಲ್ಲಿ ಡೆಲ್ಲಿ, ನ್ಯೂಯಾರ್ಕ್, ಲಂಡನ್ ಮತ್ತು ಪ್ಯಾರಿಸ್ ನಗರಗಳ ಜತೆ ಹಾಟ್‌ಲೈನ್ ಎಂಬ ಟೆಲಿಪ್ರಿಂಟರ್ ಸಂಪರ್ಕ ಇಪ್ಪತ್ತುನಾಲ್ಕು ಘಂಟೆಯೂ ಇರುತ್ತಿತ್ತು.

ಅಲ್ಲಿ ನಡೆದ ಒಂದು ಸಂಗತಿಯನ್ನು ಹೇಳಹೊರಟಿದ್ದೇನೆ. ಇದರಲ್ಲಿ ಹೇಳಿರುವ ಪ್ರತಿಯೊಂದು ಸಂಗತಿಯೂ ನಿಜವಾಗಿ ನಡೆದದ್ದು. ಕೇವಲ ಸಂಭಾಷಣೆಗಳನ್ನು ಮಾತ್ರ, ನೆನಪಿದ್ದ ಹಾಗೆ ಬರೆದಿದ್ದೇನೆ.

ನಮ್ಮ ಆಫೀಸಿನ ಹಾಟ್ ಲೈನಿನಲ್ಲಿ ಒಂದು ದಿನ ನಮ್ಮ ಘನ ಸರಕಾರದ ಗೃಹ ಮಂತ್ರಾಲಯದಿಂದ ಒಂದು ಬಹಳ ಸುದೀರ್ಘ ಸಂದೇಶ ಬಂತು. ಸುಮಾರು ಮೂರು ವಾರಗಳ ನಂತರ ಡೆಲ್ಲಿಯಿಂದ ಒಂದು ಸಂಸದೀಯ ಅಂದರೆ ಪಾರ್ಲಿಮೆಂಟರಿ ತಂಡವೊಂದು ಜರ್ಮನಿಯ ಪ್ರಾಂಕ್ ಫರ್ಟ್ ನಗರಕ್ಕೆ ಬರುವುದು. ಅದರಲ್ಲಿ ಹತ್ತು ಜನ ಸಂಸತ್ತಿನ (ಪಾರ್ಲಿಮೆಂಟಿನ) ಸದಸ್ಯರು. ಜತೆ ವಿದೇಶಾಂಗ ಮಂತ್ರಾಲಯದ ಉಚ್ಚ ಅಧಿಕಾರಿ ಮತ್ತು ಒಬ್ಬ ಸೆಕ್ರೆಟರಿ ಮೂರು ದಿನಗಳ ಭೇಟಿಗೆ ಬರುತ್ತಾರೆ. ಈ ತಂಡದ ಉದ್ದೇಶ ಏನೆಂದರೆ, ಜರ್ಮನಿಯಲ್ಲಿ ಭಾರತದ ಸರಕಾರಿ ಮತ್ತು ಅರ್ಧ ಸರಕಾರಿ ಆಫೀಸುಗಳಲ್ಲಿ ಹಿಂದಿ ಭಾಷೆಯ ಉಪಯೋಗ ಎಷ್ಟರ ಮಟ್ಟಿಗೆ ಆಗುತ್ತಿದೆ. ಸಾಕಷ್ಟು ಆಗುತ್ತಿಲ್ಲವಾದರೆ ಯಾಕೆ, ಹಾಗೆ ಮಾಡಲು ಏನು ಮಾಡಬೇಕು, ಇತ್ಯಾದಿ. ಅನಂತರ ಪ್ರತಿಯೊಬ್ಬ ಸದಸ್ಯನ ಜಾತಕವೋ ಎಂಬಂತೆ ಅವರ ವಯಸ್ಸು, ಏನು ತಿನ್ನುತ್ತಾರೆ, ಏನು ತಿನ್ನುವುದಿಲ್ಲ, ಸ್ಪೆಶಲ್ ಆಗಿ ಏನು ಮಾಡಬೇಕು, ಇತ್ಯಾದಿ, ಇತ್ಯಾದಿ ಬರೆದಿತ್ತು. ನಂತರ ಕೊನೆಯಲ್ಲಿ, ಸರಕಾರಿ ಭಾಷೆಯಲ್ಲಿ, ''ಇಟ್ ಮಸ್ಟ್ ಬಿ ಕ್ಲಿಯರ್ಲಿ ನೋಟೆಡ್ ದಟ್ ನೋ ಆಲ್ಕೋಹಾಲಿಕ್ ಡ್ರಿಂಕ್ಸ್ ಮಸ್ಟ್ ಈವನ್ ಬಿ ಆಫರ್ಡ್ ಟು ಎನಿ ಆಫ್ ದೆಮ್ ಅಟ್ ಎನಿ ಸ್ಟೇಜ್, ಅಂಡರ್ ಎನಿ ಸರ್ಕಂಸ್ಟಾನ್ಸಸ್'' (ಒಂದು ವಿಷಯ ಚೆನ್ನಾಗಿ ಗಮನಿಸಬೇಕು: ಯಾವ ವಿಧವಾದ ಮದ್ಯ ಪಾನವನ್ನಾಗಲೀ, ಯಾವ ಕಾರಣಕ್ಕಾಗಲೀ, ಯಾವ ಸಮಯದಲ್ಲೂ ಅವರಿಗೆ ಬೇಕೇ ಎಂದು ಕೇಳಲೂ ಕೂಡದು). ಸ್ಪೆಷಲ್

ಆದೇಶದಲ್ಲಿ, ಒಬ್ಬ ಸಂಸದರು ಈರುಳ್ಳಿಯನ್ನು ತಿನ್ನುವುದಿಲ್ಲ, ಇನ್ನೊಬ್ಬರು ಕಡಲೆಬೇಳೆ ಮತ್ತು ಸಾಸಿವೆ ತಿನ್ನುವುದಿಲ್ಲ, ಎಂದಿತ್ತು. ನಂತರ, ಈ ಆದೇಶಗಳನ್ನು ಮನನದಲ್ಲಿಟ್ಟುಕೊಂಡು ಸುದೀರ್ಘ ಕಾರ್ಯಕ್ರಮವನ್ನು ತಯಾರಿಸಿ ತತ್‌ಕ್ಷಣ ಉತ್ತರ ಕಳುಹಿಸಬೇಕಿತ್ತು.

ಸರಿ. ಯಥಾಪ್ರಕಾರ, ಮುಂಚೆಯೇ ಹೇಳಿದ ನಾಲ್ಕು ಆಫೀಸಿನ ಹೆಡ್ಡುಗಳ ಮೀಟಿಂಗ್ ಅರ್ಜಂಟಾಗಿ ಕರೆಯಲಾಯ್ತು. ಟೆಕ್ಸ್‌ಟೈಲ್ ಎಕ್ಸ್-ಪೋರ್ಟ್ ಪ್ರೊಮೋಷನ್ನಿನ ಜೇಕಬ್ಬನನ್ನು ಬಿಟ್ಟರೆ ನಾನೊಬ್ಬನೇ ಮದರಾಸಿ. (ಡೆಲ್ಲಿಯಲ್ಲಿ ಆವಾಗ ಎಲ್ಲಾ ದಕ್ಷಿಣ ಭಾರತೀಯರನ್ನೂ 'ಮದರಾಸಿ' ಎನ್ನುತ್ತಿದ್ದರು. ಈವಾಗ ಹೇಗೋ ಗೊತ್ತಿಲ್ಲ) ರಣಜೀತ್ ಗುಪ್ತ ಉತ್ತರ ಪ್ರದೇಶದವರು, ಲಾರೋಯ ಡೆಲ್ಲಿವಾಲ-ಪಂಜಾಬಿ (ಇವನ ತಂದೆ ಒಂದು ಕಾಲದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿದ್ದರು). ಇವರಿಗೆಲ್ಲ ನಾನು ಹಿಂದಿ ಚೆನ್ನಾಗಿ, ಸಂಸ್ಕೃತ ಕೂಡಿದ ಹಾಗೂ ಸರಕಾರಿ ಭಾಷೆ ಮಾತನಾಡಬಲ್ಲೆ ಎಂಬ ಭರವಸೆಯಿತ್ತು. ಹೀಗಾಗಿ, ಸಂಸದರ ಹಿಂದಿ ತಂಡ ಮತ್ತು ಜರ್ಮನಿಯಲ್ಲಿದ್ದ ನಮ್ಮ ಆಫೀಸುಗಳ ಪರವಾಗಿ 'ಸ್ಪೋಕ್ಸ್‌ಮನ್' ಎಂದು ತನ್ನನ್ನೇ ನಾಮಕರಣ ಮಾಡಿದರು.

ಇನ್ನು, ಮೀಟಿಂಗ್ ಮಾಡಲು ಸ್ಥಳ? ಅದೂ ನನ್ನ 'ಛೇಂಬರ್ಸ್'ನಲ್ಲೆ: ಚೆನ್ನಾಗಿ ಪ್ರಶಸ್ತವಾಗಿತ್ತು, ಅಲಂಕೃತವಾಗಿತ್ತು, ಸುಮಾರು ಇಪ್ಪತ್ತು ಜನ ಕೂರುವಂತಹ ಟೇಬಲ್ ಹಾಕಲು ಜಾಗವಿತ್ತು, ಸರಿ, ಒಂದು ದೊಡ್ಡ ಟೇಬಲ್ ಬಾಡಿಗೆಗೆ ತಂದಾಯ್ತು. ಅದರ ಜತೆ ಸುಂದರವಾದ ಕುರ್ಚಿಗಳು. ಇದಕ್ಕೆಲ್ಲಾ ಬಾಡಿಗೆ ಇತ್ಯಾದಿ ಖರ್ಚಿಗೆ? ಈ ತಂಡದ ವಿಜಿಟ್ಟಿಗೆಂದೇ ಬೇರೆ ಬಡ್ಜೆಟ್ ನಮ್ಮ ಹಾಟ್‌ಲೈನ್ ಮೂಲಕ ಸ್ಯಾಂಕ್ಷನ್ ಮಿಂಚಿನಂತೆ ಬಂದುಬಿಟ್ಟಿತ್ತು! (ಇದರಲ್ಲಿ ತಂಡಕ್ಕೆ, ಊಟ, ವಸತಿ, ಓಡಾಟಕ್ಕೆ ವಾಹನಗಳು, ಅವರಿಗೆ ಸಮರ್ಪಿಸಲು ತುರಾಯಿಗಳು ಇತ್ಯಾದಿಗೆ, 'ನೆನಪಿಗೆ' ಅಂತ ಉಡುಗೊರೆಗಳು: ಹೀಗೆ ಒಂದೊಂದೂ ಅದರಲ್ಲಿ ಅಂದರೆ ಬಂದಿದ್ದ ಬಡ್ಜೆಟ್ ಆಲೋಕೇಶನ್ನಿನಲ್ಲಿ ಧಾರಾಳವಾಗಿತ್ತು.)

ಅವರ ಈ ಭೇಟಿಯ ಸಂದರ್ಭದಲ್ಲಿ ಒಂದು ಔತಣ ಬೇಡವೆ? ಕೆಲವು ಹಳೆಯ ಸನ್ನಿವೇಶಗಳಿಂದಾಗಿ ನಾನಿದ್ದ ಮನೆ ತುಂಬಾ ದೊಡ್ಡದಾಗಿತ್ತು. ಕಥೆಗಳಲ್ಲಿ 'ಪೆಂಟ್ ಹೌಸ್' ಎಂದು ನೀವು ಓದಿರಬಹುದು ಅಥವಾ ನೀವು ನೋಡಿಯೇ ಇರಬಹುದು. ನಾನಿದ್ದದ್ದು ಒಂದು ದೊಡ್ಡ, ಸುಂದರವಾದ ಪೆಂಟ್ ಹೌಸಿನಲ್ಲಿ: ಏಳು ಅಂತಸ್ತಿನ ಬಿಲ್ಡಿಂಗಿನಲ್ಲಿ, ಆರು ಮತ್ತು ಏಳನೇ ಅಂತಸ್ತು ಎರಡೂ ನನಗೆ ಕೊಟ್ಟಿದ್ದ ಮನೆ. ತಕ್ಕೋ, ಔತಣವೂ ನಮ್ಮ ಮನೆಯಲ್ಲೇ ಎಂದು ನಿರ್ಧಾರವಾಯಿತು.

ಇನ್ನು ಬರುವವರಿಗೆಲ್ಲಾ ಊಟಕ್ಕೆ? ನಮ್ಮ ಆಫೀಸ್ ಬಳಿಯೇ ಒಬ್ಬ ಭಾರತೀಯ ಒಂದು 'ಇಟಾಲಿಯನ್' ರೆಸ್ಟೋರೆಂಟ್ ನಡೆಸುತ್ತಿದ್ದ. ಅವನಿಗೇ ಹೇಳಿ, ಭಾರತೀಯ ತಿನಿಸುಗಳನ್ನು ನಮ್ಮ ಮನೆಯಲ್ಲಿ ತಂದು ಬಡಿಸುವಂತೆ ಏರ್ಪಾಟು ಮಾಡಿಯಾಯ್ತು.

ಮುಹೂರ್ತ ಬಂದೇ ಬಂತು. ನಾವೆಲ್ಲಾ ಏರ್ ಪೋರ್ಟಿನಲ್ಲಿ ಸ್ಪೆಷಲ್ ಪಾಸ್ (ನಮಗೆಲ್ಲಾ ಇದ್ದದ್ದು ಆಫಿಷಿಯಲ್ ಪಾಸ್ ಪೋರ್ಟುಗಳು), ಏರೋಪ್ಲೇನ್ ಇಳಿಯುವ ಜಾಗದಿಂದ ಸ್ವಲ್ಪವೇ ದೂರದಲ್ಲಿ ಕಾಯುತ್ತ ನಿಂತಿದ್ದೆವು. ನಮ್ಮ ದೇಶದಲ್ಲಿ ಇರೋ ಹಾಗೆ ಹಾರಗಳಿರಲಿಲ್ಲ. ಕೇವಲ ಬಿಡಿ ಹೂವುಗಳ ಸಣ್ಣ ಸಣ್ಣ ಗೊಂಚಲುಗಳು ಮಾತ್ರ.

ಬಂತು ತಂಡ. ಎಲ್ಲಾರಿಗೂ ಮುಂದೆ ವಿದೇಶ ಮಂತ್ರಾಲಯದ ಅಧಿಕಾರಿ. ಸುಮಾರು ಒಂಬತ್ತೋ ಹತ್ತೋ ಜನ ಸದಸ್ಯರು. ಅದರಲ್ಲಿ ಒಬ್ಬರು ಉತ್ತರ ಪ್ರದೇಶದ 'ಪಹಾಡಿ' (ಅಂದರೆ, ಪರ್ವತ) ಇಲಾಖೆಯಿಂದ ಬಂದ ಬ್ರಾಹ್ಮಣ. ಜಾತಿ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ, ಅಲ್ಲಿ ಬ್ರಾಹ್ಮಣರು ತುಂಬಾ ನಿಷ್ಠಾವಂತರು: ಸಂಧ್ಯಾವಂದನೆ, ಪೂಜೆ, ಮಡಿ ಇತ್ಯಾದಿ. ಈ ವ್ಯಕ್ತಿಗೆ ತುಂಬಾ ವಯಸ್ಸಾಗಿತ್ತು, ಸೊಂಟದಿಂದ ಮುಂದಕ್ಕೆ 90 ಡಿಗ್ರೀ ಬಗ್ಗಿದ್ದರು, ಕೈಯ್ಯಲ್ಲೊಂದು ಕೋಲು, ತಲೆಯ ಮೇಲೆ ಗಾಂಧಿ ಟೋಪಿ, ಕಣ್ಣಿಗೆ ಹಳೆ ಕಾಲದ ಸೋಟ ಬಾಡಲ್ ಬುಡದಂಥಾ ಕನ್ನಡಕ. ಅವರ ಹೆಸರು ಮರೆತು ಹೋಗಿದೆ, ಜಟಾಯು ಎಂದು ಕರೆಯೋಣ. ಈ ಜಟಾಯುವೇ ಈರುಳ್ಳಿ, ಕಡಲೆಬೇಳೆ ತಿನ್ನದಿದ್ದವರು. ಮಿಕ್ಕವರೂ ಸಾಧಾರಣ ಎಲ್ಲರೂ ಖಾದಿ ತೊಟ್ಟಿದ್ದರು. ಫ್ರಾಂಕ್ ಫರ್ಟ್ ಏರ್ ಪೋರ್ಟ್ ಒಂದು ಅದ್ಭುತವಾದ ಜಾಗ. ತುಂಬಾ ದೊಡ್ಡದು. ಅಲ್ಲಿ ಸಿಗೊಲ್ಲ ಅನ್ನೋದೇ ಇಲ್ಲ, ಎಲ್ಲಾ ವಿಧವಾದ ಊಟಗಳು (ಉದಾ: ಚೈನೀಸ್, ಜಪಾನಿ, ಕೊರಿಯನ್, ಇಂಡಿಯನ್, ಥಾಯ್, ಮೆಕ್ಸಿಕನ್ ಇತ್ಯಾದಿ) ಸಿಗುವ ಬೇರೆ ಬೇರೆ ರೆಸ್ಟಾರೆಂಟುಗಳು, ಸಿನಿಮಾ ಹಾಲುಗಳು, ವಿಡಿಯೊ ಪಾರ್ಲರುಗಳು, ಸೆಕ್ಸ್ ಶೋಗಳು, ವೇಶ್ಯೆಯರು, ಹೇರ್ ಕಟ್ಟಿಂಗ್ ಸೆಲೂನುಗಳು, ಏನು ಬೇಕಾದರೂ. ಅಲ್ಲಿ ಬರುವವರಿಗೆ ಅನುಕೂಲವಾಗಲಿ ಅಂತ ಅಸಂಖ್ಯಾತ ದಿಕ್ಸೂಚಿ ಬೋರ್ಡುಗಳಿದ್ದವು. ಇವನ್ನೆಲ್ಲಾ ನೋಡುತ್ತಾ, ಜಟಾಯುವನ್ನು ಮುಂದೆ ಮಾಡಿಕೊಂಡು ನಾವೆಲ್ಲಾ ಗುಂಪಾಗಿ ಹೊರಗೆ ಬಂದೆವು. ಅಲ್ಲಿಂದ ಟ್ಯಾಕ್ಸಿ ಮಾಡಿಕೊಂಡು ಅವರಿಗಾಗಿ ಕಾದಿರಿಸಿದ್ದ ಹೋಟಲನ್ನು ತಲುಪಿದೆವು. ಶ್ರೀ ಜಟಾಯುವನ್ನು ನಾನೇ ಅವರ ಕೋಣೆಗೆ ಕೊಂಡೊಯ್ದೆ. (ಜರ್ಮನಿಯಲ್ಲಿ ಅತ್ಯಂತ ಕಡಿಮೆ ಬೆಲೆಯ ಹೋಟಲ್ಲುಗಳೂ ನಂಬಲಾಗದಷ್ಟು ಶುಭ್ರವಾಗಿರುತ್ತವೆ). ಇವರಿದ್ದದ್ದು ಫೈವ್ ಸ್ಟಾರ್ ಹೋಟಲ್ಲು, ಇನ್ನೇನು ಬೇಕು? ನಮ್ಮ ಯಜಮಾನರು ಬಾತ್ ರೂಂ ನೋಡಿ ಬಂದರು. ಸೊಗಸಾದ ಶವರ್ ಇತ್ಯಾದಿ. ಆದರೆ, ಅವರು ಒಂದು ಬಕೆಟ್ ಮತ್ತು ಒಂದು ಮಗ್ ಬೇಕು ಎಂದರು. ಏಕೆ, ಎಂದು ಕೇಳಿದೆ. ಬಕೆಟ್ - ಮಗ್ ಮಾತ್ರವೇ ಮಡಿಯಂತೆ, ಶವರಿನಲ್ಲಿ ಮಾಡುವುದು 'ಪಿತೃ' ಕಾರ್ಯ (ಎಂದರೆ ಶ್ರಾದ್ಧಕ್ಕೆ) ಎಂದು ಅರ್ಥ ಹೇಳಿದರು. ಸರಿ, ಫ್ರಂಟ್ ಡೆಸ್ಕ್‌ಗೆ ಹೋಗಿ (ಮಡಿ ಅಂದರೆ ಅವರಿಗೇನು ಗೊತ್ತು?) ನಮ್ಮ ಯಜಮಾನರಿಗೆ ಶವರ್ ಉಪಯೋಗ ಮಾಡಿ ಅಭ್ಯಾಸವಿಲ್ಲ, ಹೇಗಾದರೂ ಮಾಡಿ ಒಂದು ಬಕೆಟ್, ಒಂದು ಮಗ್ ಕೊಡಿ ಅಂದೆ. ಪಾಪ, ಅವನಿಗೆ ಇದೆಲ್ಲಾ ಕಲ್ಚರಲ್ ಷಾಕ್ ಆಗಿರಬೇಕು. ಆದರೆ ಕಸುಬುದಾರ, ಪೆಚ್ಚು ತೋರಿಸಿಕೊಳ್ಳಲಿಲ್ಲ: ಯೋಚಿಸಿ, ತಮ್ಮ ಗಾರ್ಡನ್ ಡಿಪಾರ್ಟ್ - ಮೆಂಟಿನಿಂದ ತರಿಸುವ ಕೆಲಸ ಮಾಡಿದ.

ಅಂದಿನ ರಾತ್ರಿ ಭೋಜನ ನಮ್ಮ ಮನೆಯಲ್ಲಿ. ಎಲ್ಲಾ ಆಫೀಸಿನ ಅಧಿಕಾರಿಗಳು, ಅವರವರ ಪತ್ನಿಯರು, ಮಕ್ಕಳು ಮತ್ತು ದೆಹಲಿಯಿಂದ ಬಂದಿದ್ದ ಸಂಸದರ ಸೇನೆ.

ಅಂದಿನ ಕಾಲದಲ್ಲಿ ನನ್ನ ಮನೆಯಲ್ಲಿದ್ದ ಬಾರಿನ ಬಗ್ಗೆ ಒಂದು ಮಾತು ಇಲ್ಲಿ ಪ್ರಸ್ತುತ. ನಮಗೆ ಡಿಪ್ಲೊಮಾಟಿಕ್ ರೇಟಿನಲ್ಲಿ ಸಿಗುತ್ತಿದ್ದ ಕಾರಣ, ಬ್ಲಾಕ್ ಟೇಬಲ್ ಸ್ಕಾಚ್ ಮತ್ತು ಇನ್ನಿತರ ಸ್ಕಾಚುಗಳು, ಸ್ಮಿರ್ನೋಫ್ ವೋಡ್ಕ, ಬೀಫೀಟರ್ ಜಿನ್ನು, ರೆಮಿ ಮಾರ್ಟಿನ್ ಕೋನಿಯಾಕ್, ಹೀಗೇ ಅತ್ಯುತ್ತಮವಾದ ಬ್ರಾಂಡಿನ ಕೆಂಪು ವೈನು, ಬಿಳಿ ವೈನುಗಳು, ಕೋನಿಯಾಕುಗಳು, ಕ್ರೀಂ ಡಿ ಮೆಂಥ್, ಅನೇಕ ವಿಧವಾದ ಬೀರುಗಳು ಇತ್ಯಾದಿ ಯಾವಾಗಲೂ ಇರುತ್ತಿತ್ತು. ಅಂದೂ ಇತ್ತು.

ವಿದೇಶ ಮಂತ್ರಾಲಯದ ಮಹಾಶಯ (ಇವನನ್ನು 'ನಾಯಕ' ಎಂದು ಕರೆಯೋಣ) ಮೊದಲು ಮನೆಯೊಳಗೆ ಕಾಲಿಟ್ಟರು. ಬರುತ್ತಿದ್ದ ಹಾಗೇ ನಮಗೆಲ್ಲಾ ಸರಕಾರದ ಆದೇಶವನ್ನು ನೆನಪಿಸಿದರು: ಯಾರಿಗೂ ಮದ್ಯಪಾನವನ್ನು ಆಫರ್ ಕೂಡ ಮಾಡಬಾರದು ಎಂದು. ಸರಿ ಎಲ್ಲರನ್ನೂ ಉಪಚಾರ ಮಾಡುತ್ತಾ ಒಳಗೆ ಕರೆದು ಕೂಡಿಸಿ, ನಿಂಬೆಹಣ್ಣಿನ ಶರಬತ್ತು, ಕೋಕಾ ಕೋಲ ಇತ್ಯಾದಿಗಳನ್ನು ಹಂಚಿದೆವು. ಕೆಲ ನಿಮಿಷಗಳ ನಂತರ ನಾಯಕ ನನ್ನ ಬಳಿ ಬಂದು, 'ರಮೇಶ್ ಸಾಬ್, ಕೋಕಕೋಲಾಕೆ ಸಾಥ್ ಕುಛ್ ವ್ಹಿಸ್ಕಿ ಮಿಲಾಕೆ ದೇದೀಜಿಯೆ ಮುಝೆ, ಥಕ್ ಗಯಾಹೂನ್' ಅಂದ. (ರಮೇಶ್ ಸಾಹೇಬರೆ, ಕೋಕಕೋಲಾ ಜತೆ ಸ್ವಲ್ಪ ವ್ಹಿಸ್ಕಿ ಹಾಕಿಕೊಡಿ, ಯಾಕೋ ಸುಸ್ತಾಗಿದೆ). ಅವನಿಗೆ ಕೋಲಾದ ಜತೆ ಸ್ಕಾಚ್ ಬೆರಸಿ ಕೊಟ್ಟೆ. ಇನ್ನು ಕೆಲ ನಿಮಿಷಗಳ ನಂತರ ಒಬ್ಬ ಸಂಸದ್ ಸದಸ್ಯರು ಕಿವಿಯಲ್ ಪಿಸುಗುಟ್ಟಿದರು: ನಿಂಬೆ ಪಾನಕದ ಜತೆ ಜಿನ್ನೇನಾದರೂ ಇದ್ದರೆ ಸ್ವಲ್ಪ ಹಾಕಿ ಕೊಡಿ, ಸ್ವಲ್ಪ ಸುಸ್ತಾಗಿದೆ, ಅಂದರು ಅವರಂದಂತೆ ಕೊಟ್ಟಾಯ್ತು. ದಯವಿಟ್ಟು ನಂಬಿ: ಮುಂದಿನ ಹದಿನೈದು ನಿಮಿಷಗಳಲ್ಲಿ ಶ್ರೀ ಜಟಾಯು ಅವರನ್ನು ಬಿಟ್ಟು ಎಲ್ಲರೂ ಗುಂಡು ಹಾಕಿದ್ದೇ ಹಾಕಿದ್ದು! ಕೆಲ ನಿಮಿಷಗಳ ನಂತರ ನಮ್ಮ ಪಾರ್ಟಿಯಲ್ಲಿ ಹೊಸದಾದ ಒಂದು ಚೇತನ ಮೂಡಿ ಬಂತು. ಶ್ರೀ ಜಟಾಯು ಒಬ್ಬರು ಮಾತ್ರ, ಜರ್ಮನಿಯಲ್ಲಿನ ಜೀವನದ ಬಗ್ಗೆ, ಜನರ ಬಗ್ಗೆ ಮಾತನಾಡುತ್ತಿದ್ದರು. ಅವರು 90 ಡಿಗ್ರೀ ಬಾಗಿದ್ದರಿಂದ ನಾನು ಅವರೊಡನೆ ಮಾತನಾಡುವಾಗ ನೆಲದ ಮೇಲೆ ಕುಳಿತು, ಮೇಲೆ ನೋಡುತ್ತಾ ಮಾತನಾಡುತ್ತಿದ್ದೆ. ನನ್ನ ಇತರ ಸಹ-ಯೋಗಿಗಳು ಸದ್ದಿಲ್ಲದೆ ತಮತಮಗೆ ಬೇಕಾದ ಗುಂಡು ಹೀರುತ್ತಿದ್ದರು. ಭೋಜನದ ಸಮಯದಲ್ಲಿ, ಶ್ರೀ ಜಟಾಯು ನಿಷ್ಠೆಯಿಂದ ಆಪೋಶನೆ ಮಾಡಿ, ಈರುಳ್ಳಿ-ಕಡಲೆಬೇಳೆಯಿಲ್ಲದ ತಮ್ಮ ಮಿತವಾದ ಭೋಜನವನ್ನು ಮುಗಿಸಿದರು. ಮಿಕ್ಕ ಅನೇಕರು, ಗುಂಡು ಮತ್ತು ಅದರ ಜತೆ ಪಕೋಡ, ಚಿಪ್ಸ್, ಚಿಕ್ಕನ್ ಟಿಕ್ಕ ಇತ್ಯಾದಿಗಳನ್ನು ಹೊಡೆಯುತ್ತಾ ಮತ್ತೆ - ಮತ್ತೆ ಗುಂಡು ಹಾಕುತ್ತಲೇ ಇದ್ದರು. ನಾನು ನಾಯಕನ ಬಳಿ ಹೋಗಿ ಹೇಳಿದೆ; ಅಯ್ಯಾ, ಇವರೆಲ್ಲಾ ನಾಳೆ ಬೆಳಿಗ್ಗೆ ಮೀಟಿಂಗಿಗೆ ಬರಬೇಕು, ಸ್ವಲ್ಪ ಹೇಳುತ್ತೀರಾ? ಪಾಪ, ಎಲ್ಲರಿಗಿಂತ ಸುಖವನ್ನು ಅನುಭವಿಸುತ್ತಿದ್ದ ಅವನು, ವಿಧಿಯಿಲ್ಲದೆ ಎಲ್ಲರಿಗೂ ಹೇಳಿದ: ಹೊತ್ತಾಯಿತು, ಹೊರಡೋಣ. ಸರಿ, ಎಲ್ಲರೂ ಒನ್ ಫಾರ್ ದಿ ರೋಡ್ ಎಂದು ಗೊಣಗುತ್ತಾ ಮುಗಿಸಿ ಹೊರಟರು. ನಮ್ಮ ನೇತಾಗಳ ನೈತಿಕತೆ ನೋಡಿ ತುಂಬ ಜಿಗುಪ್ಸೆಯಾಯಿತು. ಇರಲಿ.

ಮಾರನೆಯ ಬೆಳಿಗ್ಗೆ ನನ್ನ ಆಫೀಸಿನಲ್ಲಿ ಮೀಟಿಂಗು. ಶುದ್ಧ ಸಂಸ್ಕೃತ ಕೂಡಿದ್ದ ಸರಕಾರಿ ಭಾಷೆಯಲ್ಲಿ ಸ್ವಾಗತ ಭಾಷಣ ಮಾಡಿದೆ. ಸಂಸದರ ನೇತಾ ಉತ್ತರಿಸುತ್ತಾ, ದಕ್ಷಿಣ ಭಾರತದ ಒಬ್ಬ ಅಧಿಕಾರಿ ಹಿಂದಿಯಲ್ಲಿ ಇಷ್ಟು ಚೆನ್ನಾಗಿ ಮಾತನಾಡುತ್ತಾರೆ ಎಂದರೆ ಹಿಂದಿ ಭಾಷೆ ಎಷ್ಟು ಜನಪ್ರಿಯವಾಗಿದೆ, ಎಷ್ಟು ಹರಡಿದೆ ಎಂದು ತಿಳಿಯುತ್ತದೆ ಎಂದೆಲ್ಲಾ ಹೇಳಿ, ಜರ್ಮನಿಯಂಥಾ ದೇಶಗಳಲ್ಲಿ ಎಲ್ಲೆಡೆ ಜರ್ಮನ್ ಭಾಷೆಯನ್ನೇ ಬಳಸುತ್ತಾರೆ, ಭಾರತದಲ್ಲಿ ಹಿಂದಿಯನ್ನು ಬಳಸಲು ಏಕೆ ಜನ ಇಷ್ಟ ಪಡುವುದಿಲ್ಲ ಎಂದು ಕೇಳಿದರು. ನಾನೆಂದೆ: ಜರ್ಮನಿ ನಮ್ಮ ಕೇರಳದಷ್ಟಿದೆ, ಸಂಪೂರ್ಣ ಯುರೋಪಿನಲ್ಲಿ ಎಷ್ಟು ವೈವಿಧ್ಯತೆಯಿದೆಯೋ ಅದಕ್ಕಿಂತಲೂ ಹೆಚ್ಚು ನಮ್ಮ ದೇಶದಲ್ಲಿದೆ. ಜರ್ಮನಿಯಲ್ಲಿ ಜರ್ಮನ್ ಭಾಷೆಯಿದ್ದರೆ, ಕೇರಳದಲ್ಲಿ ಮಲಯಾಳಂ ಇಲ್ಲವೆ ಎಂದೆ. ಅವರಿಗೆ ಸ್ವಲ್ಪ ಕೋಪ ಬಂದಂತಿತ್ತು. ತಕ್ಷಣ, ಸೇರಿಸಿದೆ: ಆದರೆ ನಮ್ಮ ಮಹಾನ್ ದೇಶದ ಪ್ರಗತಿಯಾಗಬೇಕಾದರೆ, ಹಿಂದಿ ಎಲ್ಲರೂ ಮಾತನಾಡಿ, ತಮ್ಮ ತಮ್ಮ ಕೆಲಸದಲ್ಲಿ ಉಪಯೋಗಿಸುವಂತಾಗಬೇಕು. ಕೇಳಿ, ಎಲ್ಲರೂ ಭಲೆ, ಭಲೆ ಎಂದರು! ಇನ್ನು ನಮ್ಮ ಜರ್ಮನಿಯಲ್ಲಿನ ಆಫೀಸುಗಳಲ್ಲಿ ಹಿಂದಿ ಹೆಚ್ಚು ಉಪಯೋಗಿಸುವುದು ಹೇಗೆ ಎಂಬ ಪ್ರಶ್ನೆ ಬಂತು. ಜರ್ಮನರಿಗೆ ಅಷ್ಟು ಹಿಂದು ಗೊತ್ತಿಲ್ಲ, ಇಂಗ್ಲೀಷೂ ಗೊತ್ತಿಲ್ಲ, ಜರ್ಮನ್ ಭಾಷೆಯಲ್ಲಿಯೇ. ನಮ್ಮ ಹೆಡ್ ಆಫೀಸಿನೊಡನೆ ಹಿಂದಿ ಹೆಚ್ಚಾಗಿ ಉಪಯೋಗಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟೆವು. ನಮ್ಮ ಜೇಕಬ್ ಸರದಿ ಬಂತು. ಅವನು ತಲೆಯೆತ್ತಿ ದೃಢ ಧ್ವನಿಯಲ್ಲಿ: ''ಐ ಡೋಂಟ್ ನೋ ಇಂಡಿ'', ಎಂದುಬಿಡೋದೆ?!

ಎಲ್ಲರಿಗೂ ಉಡುಗೊರೆಗಳನ್ನು ಕೊಟ್ಟು ಏರ್ಪೋರ್ಟಿಗೆ ಬಿಟ್ಟು ಪ್ಯಾರಿಸ್ಸಿಗೆ ರವಾನೆ ಮಾಡಿ ಬಂದೆವು. ನಮ್ಮ ಭಾರತ ಸರಕಾರಕ್ಕೆ ಎಷ್ಟೊಂದು ಲಕ್ಷ ಖರ್ಚಾಗಿತ್ತೋ ಏನೋ, ಎಲ್ಲರೂ ಮಜಮಾಡಿದ್ದು ನಿಜ ಆದರೆ ಹಿಂದಿ ಎಷ್ಟು ಉದ್ಧಾರವಾಯ್ತೋ ದೇವರಿಗೇ ಗೊತ್ತು.

ಒಂದು ಪೋಸ್ಟ್‌ಸ್ಕ್ರಿಪ್ಟ್: ಜರ್ಮನಿಗೆ ಹೋಗುವ ಮೊದಲು ನಾನು ನಮ್ಮ ಸಂಸ್ಥೆಯ ಬೆಂಗಳೂರು ಆಫೀಸಿನಲ್ಲಿ ಹೆಡ್ಡಾಗಿದ್ದೆ. ಅಲ್ಲೂ ಹಿಂದಿಯ ಬಗ್ಗೆ ತುಂಬಾ ''ಕೆಲಸ'' ಮಾಡಬೇಕಿತ್ತು. ಹಿಂದಿಯನ್ನು ಹೆಚ್ಚು ಆಕರ್ಷಿಸುವಂತೆ ಮಾಡುವುದು ಹೇಗೆ ಎಂದು ನನ್ನ ನನ್ನ ಡೆಲ್ಲಿ ಆಫೀಸಿಗೆ ಹೇಳಬೇಕಿತ್ತು. ನನ್ನ ಉತ್ತರ: ಭಾರತದ ವಿವಿಧ ಪ್ರಾಂತಗಳನ್ನು ಒಟ್ಟಿಗೆ ತರುವಲ್ಲಿ ಅದ್ಭುತ ಕೆಲಸ ಮಾಡಿರುವುದು ಹಿಂದಿ ಸಿನಿಮಾಗಳು. ಆದ್ದರಿಂದ, ನನ್ನ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಸ್ಟಾಫಿಗೆಲ್ಲ ವಾರಕ್ಕೆ ಒಂದರಂಗೆ ಹಿಂದಿ ಸಿನಿಮಾ ನೋಡಲು ನಾವು ಹಣ ಕೊಡಬೇಕು ಎಂಬ ಸಲಹೆ ಕಳುಹಿಸಿದೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ: ಡೆಲ್ಲಿಯಿಂದ ಉತ್ತರ ಬಂತು: ಸಲಹೆ ಚೆನ್ನಾಗಿದೆ, ಆದರೆ, ವಾರಕ್ಕೊಂದು ಸಲ ಬೇಡ, ತಿಂಗಳಿಗೊಂದು ಸಲ ಕಳುಹಿಸಿ. ನಾನು ಬೆಂಗಳೂರಿನಲ್ಲಿರುವವರೆಗೂ ಇದು ಹಾಗೆಯೇ ನಡೆದುಕೊಂಡು ಬಂದಿತ್ತು. ಹುಚ್ಚು ಮುಂಡೆ ಮದುವೇಲಿ ಉಂಡವನೇ ಜಾಣ, ಅಲ್ವೆ? (ನಾನು ಜರ್ಮನಿಯಲ್ಲಿದ್ದಾಗ ನಡೆದ ಇತರ ಮೋಜಿನ ಸಂಗತಿಗಳನ್ನು ಬರೆದು ಕಳಿಸುತ್ತೇನೆ. ಸಂಪಾದಕರಿಗೆ ಸರಿ ಎನ್ನಿಸಿದರೆ, ಸಿಮ್ಮ ತನಕ ಬಂದೀತು.)

ಇಲ್ಲೂ ಅವರೇ ಸಿಗುತ್ತಾರೆ....!

- ಎಚ್. ಗೋಪಾಲಕೃಷ್ಣ

ಒಂದು ಹಳ್ಳಿಯ ಹೊರಭಾಗದಲ್ಲಿ ಒಂದು ಮುದುಕಿ ಒಂದು ಸಣ್ಣ ಅಂಗಡಿಯನ್ನು ಇಟ್ಟುಕೊಂಡಿದ್ದಳು. ಅಂಗಡಿಯಲ್ಲಿ ಬೀಡಿ, ಸಿಗರೇಟು, ಪೆಪ್ಪರಮೆಂಟು ಇತ್ಯಾದಿಗಳನ್ನು ಮಾರಾಟ ಮಾಡುತ್ತಿದ್ದಳು. ಒಂದು ದಿವಸ ಅಂಗಡಿಯೆದುರು ಹಾದು ಹೋಗುತ್ತಿದ್ದ ದಾರಿಹೋಕನೊಬ್ಬ ಅಂಗಡಿಗೆ ಬಂದ. ಅಜ್ಜೀ ಪಕ್ಕದ ಹಳ್ಳಿಯಿಂದ ಬರುತ್ತಿದ್ದೀನಿ, ಈ ಹಳ್ಳಿಯ ಜನ ಹೇಗೇ....? ಅಂತ ಕೇಳಿದ.

ಪಕ್ಕದ ಹಳ್ಳಿ ಹೇಗೆ ಅನಿಸಿತಪ್ಪಾ ಅಂತ ಅಜ್ಜಿ ಕೇಳಿದಳು.

ಅಜ್ಜೀ ಆ ಹಳ್ಳಿಯವರೆಲ್ಲರೂ ದುಷ್ಟರು, ಸುಳ್ಳು ಹೇಳುವವರು, ಒಳ್ಳೆಯವರನ್ನು ದೀಪ ಹಚ್ಚಿ ಹುಡುಕಬೇಕು... ಅಂದ.

ಅಪ್ಪಾ ಈ ಹಳ್ಳೀನೂ ಹಾಗೇನೇ... ಅಂದಳು ಅಜ್ಜಿ.

ಆತ ಅತ್ತ ಹೊರಟ ಕೊಂಚ ಸಮಯದಲ್ಲೇ ಮತ್ತೊಬ್ಬ ದಾರಿಹೋಕ ಅತ್ತ ಬಂದ.

ಅಜ್ಜೀ ಈ ಹಳ್ಳಿ ಹೇಗೇ...? ಅಂತ ಕೇಳಿದ.

ಎಲ್ಲಿಂದ ಬರುತ್ತಾ ಇದೀಯಪ್ಪಾ... ಅಂತ ಅಜ್ಜಿ ಕೇಳಿತು.

ಪಕ್ಕದ ಹಳ್ಳಿಯಿಂದ ಅಜ್ಜೀ... ಅಂತ ಉತ್ತರ ಬಂದಿತು.

ಪಕ್ಕದ ಹಳ್ಳಿ ಹೇಗನ್ನಿಸಿತಪ್ಪಾ ಅಂತ ಅಜ್ಜಿ ಕೇಳಿದಳು.

ಅದು ತುಂಬಾ ಚೆನ್ನಾಗಿದೆ ಅಜ್ಜೀ, ಜನ ತುಂಬಾ ಸಂಭಾವಿತರು, ಒಳ್ಳೆಯವರು, ಒಂತರಾ ಸಜ್ಜನರು... ಅಂದ.

ಅಪ್ಪಾ ಈ ಹಳ್ಳಿಯಲ್ಲೂ ಹಾಗೇನೇ.... ಅಂತ ಅಜ್ಜಿ ಉತ್ತರಿಸಿತು.

ಲಂಗು ಲಗಾಮಿನ ಅಗತ್ಯ....

- ಗುರು

ಉದಯ ಟೀವಿಯಲ್ಲಿ ತೀರಾ ಈಚೆಗೆ ಆರಂಭಗೊಂಡ ಧಾರಾವಾಹಿಗಳಲ್ಲಿ ಹಾಸ್ಯ ಮತ್ತು ಕೌಟುಂಬಿಕ ಕಥೆಯನ್ನು ಒಳಗೊಂಡ ಕಥಾನಕ ಎಂಬ ಹೆಸರಿನಲ್ಲಿ ಚಿತ್ರರವಾಗುತ್ತಿರುವ ಒಂದು ಸೀರಿಯಲ್ಲು ಎಂದರೆ ಜಗಳಗಂಟಿಯರು ಎಂಬ ಕಥೆ. ಸಂಜೆ ಏಳು ಗಂಟೆಗೆ ಇದು ಪ್ರಸಾರಗೊಳ್ಳುತ್ತಿದೆ. ಮಾಮೂಲಾಗಿ ಜಗಳ ಮಾಡೋರು ಹೆಂಗಸರೇ ಎಂಬ ಬೇಸಿಕ್ ಸೂತ್ರದಿಂದಲೇ ಕತೆ ಆರಂಭ ಮತ್ತು ಇದಕ್ಕೆ ಪೂರಕವಾಗಿ ಅತ್ತೆ ಸೊಸೆಯರು ಮತ್ತು ಅವರ ಪಟಾಲಮ್ಮುಗಳೂ ಸೀರಿಯಲ್ಲಿನಲ್ಲಿ ಇವೆ.


ಹಾಸ್ಯ ಧಾರಾವಾಹಿ ಎಂದ ಮೇಲೆ ಏನನ್ನು ಬೇಕಾದರೂ ಸೇರಿಸಬಹುದು ಎಂಬ ನಂಬಿಕೆ ಸರ್ವೆ ಸಾಮಾನ್ಯವಾಗಿರುವುದರಿಂದ ಇಲ್ಲಿಯೂ ಅತ್ತೆಯ ಸಂಘವೂ ಸೊಸೆಯರ ಸಂಘವೂ ಇದೆ. ಈ ಸಂಘಗಳಿಗೆ ತರಬೇತಿ ನೀಡಲೆಂದೇ ಒಂದು ದಪ್ಪನೆಯ ಅತ್ತೆಯೂ ಇದೆ ಹಾಗೂ ಅತ್ತೆಯರಿಗೆ ಟ್ರೈನಿಂಗು ನೀಡಿದ ಮೇಲೆ ಸೊಸೆಯರಿಗೆ ಟ್ರೈನಿಂಗ್ ನೀಡದಿದ್ದರೆ ಆದೀತೇ? ಈ ಕಾರಣಕ್ಕಾಗಿಯೇ ಸೊಸೆಯರಿಗೂ ತರಬೇತಿ ನೀಡುವ ಮತ್ತೊಂದು ಶಾಲೆಯೂ ಇದೆ.

ಒಮ್ಮೆ ಅಸಂಬದ್ಧವಾಗಿ ಆರಂಭಗೊಂಡದ್ದು ಅಸಂಬದ್ಧವಾಗಿಯೇ ಮುಂದುವರಿಯಬೇಕು, ಇವುಗಳ ಮಧ್ಯೆ ಹಾಸ್ಯವನ್ನೂ ಮತ್ತು ಕೌಟುಂಬಿಕತೆಯನ್ನೂ ವಿಸ್ತರಿಸುವ ಪ್ರಯತ್ನವನ್ನು ನಡೆಸಲಾಗುತ್ತಿದೆ. ಅಸಂಬದ್ಧವನ್ನು ಉಣಬಡಿಸಲು ಸೊಸೆಯರ ಒಂದು ಗ್ಯಾಂಗೂ ಅತ್ತೆಯರ ಒಂದು ಗ್ಯಾಂಗೂ ತಯಾರಾಗಿ ಗೆಜ್ಜೆ ಕಟ್ಟಿಕೊಂಡು ಕಾದಿವೆ. ಅವುಗಳ ಹಿಮ್ಮೇಳವಾಗಿ ಮೂರು ಮೂರು ಸಂಸಾರಗಳ ಆಖಾಡವನ್ನೂ ನಿರ್ದೇಶಕರು ತಯಾರಿಸಿದ್ದಾರೆ.

ಕಥಾ ಹಂದರ ಇನ್ನೂ ಟೇಕ್ ಆಫ್ ಆಗಿಲ್ಲ ಮತ್ತು ಇತರ ಹಾಸ್ಯ ಧಾರಾವಾಹಿಗಳನ್ನು ಬರೆದು ನಿರ್ದೇಶಿಸಿರುವ ಈ ನಿರ್ದೇಶಕರ ಹಿನ್ನೆಲೆ ಗಮನಿಸಿದರೆ ಇದೂ ಸಹ ಇನ್ ಬಿಟ್ಸ್ ಗುಡ್ ಅಂತ ಅನಿಸಬಹುದೇನೋ.... ಅದೇ ರೀತಿಯಲ್ಲಿಯೇ ಈ ಧಾರಾವಾಹಿಯೂ ಸಹ ಜನಸಾಮಾನ್ಯರ ಆಕ್ರೋಶಕ್ಕೆ ಒಂದು ದಾರಿಯಾಗುವ ಮುನ್ಸೂಚನೆಗಳೂ ಕಾಣುತ್ತಿವೆ. ಹಿಂದೆ ಇದೇ ನಿರ್ದೇಶಕರ ಮತ್ತೊಂದು ಧಾರಾವಾಹಿಯೂ ಹೀಗೇ ಪ್ರಚಾರ ಪಡೆದುಕೊಂಡಿತ್ತು ಮತ್ತು ಅದೇ ನೆನಪನ್ನು ಕೆದಕಿ ನೋಡಿದರೆ ಪ್ರೇಕ್ಷಕರನ್ನು ಸೆಳೆಯಲು

ಒಂದು ಸುಲಭವಾದ ದಾರಿಯೆಂದರೆ ಪಾಸಿಟೀವ್ ಆಗಿಯೋ ಅಥವಾ ನೆಗಟೀವ್ ಆಗಿಯೋ ಪ್ರಚಾರ ಪಡೆಯುವುದು ಅಂತ ಅನಿಸಿದರೆ ಅದು ನಿಮ್ಮ ತಪ್ಪಲ್ಲ!

ಹಿರಿಯ ನಟ ನಟಿಯರು, ನುರಿತ ತಾಂತ್ರಿಕ ವರ್ಗ, ನುರಿತ ನಿರ್ದೇಶಕರು... ಹೀಗೆ ಎಲ್ಲರೂ ನುರಿತವರು ಮತ್ತು ಅನುಭವಸ್ಥರೇ ತುಂಬಿರುವಾಗ ಪ್ರೇಕ್ಷಕ ಕೊಂಚ ವಿಭಿನ್ನವಾದದ್ದನ್ನು ಅಪೇಕ್ಷಿಸುತ್ತಾನೆ. ಈ ನಿಟ್ಟಿನಲ್ಲಿ ''ಜಗಳಗಂಟಿಯರು'' ಗ್ಯಾಂಗು ಕೊಂಚ ಹೋಂ ವರ್ಕು ಮಾಡುವುದು ಒಳ್ಳೆಯದು ಮತ್ತು ಈ ಹೋಂ ವರ್ಕಿನಿಂದ ಕನ್ನಡ ಹಾಸ್ಯ ಧಾರಾವಾಹಿಗಳಿಗೆ ಅವರುಗಳು ಒಂದು ಹೊಸಾ ದೃಷ್ಟಿಯನ್ನೂ ಮತ್ತು ಆಯಾಮವನ್ನೂ ನೀಡುವುದು ಸಾಧ್ಯ. ಈ ದಾರಿಯಲ್ಲಿ ಈ ಸೀರಿಯಲ್ಲಿನ ಲೇಖಕರು ಮತ್ತು ನಿರ್ದೇಶಕರು ಯೋಚಿಸಲಿ. ಆಗಲಾದರೂ ಹಾಸ್ಯ ಧಾರಾವಾಹಿ ಎಂಬ ಹಣೆಪಟ್ಟಿ ಹೊಂದಿ ಬೇಕಾದ್ದನ್ನೆಲ್ಲಾ ಮಾಡಬಹುದು ಎಂಬ ಚಿಂತನೆಗೆ ಕಡಿವಾಣ ಬಿದ್ದೀತು....





ಹೊಂದಾಣಿಕೆ

- ಕುಮುದಾ ಪುರುಷೋತ್ತಮ್

ವೆಂಕಟ್ರಸ್ತೆ ಜೋಯಿಸರನ್ನು ನೋಡಲು ಅವರ ಮನೆಗೆ ಹೋದಾಗ ಒಳ ಹೋಗಲೂ ಸಾಧ್ಯವಾಗದಷ್ಟು ರಷ್ಟು. ಕಾರಣ ಆಷಾಢ ಅಂದೇ ಮುಗಿಯುವುದರಲ್ಲಿತ್ತು. ಮದುವೆ, ಮುಂಜಿ, ಗೃಹಪ್ರವೇಶ ಇತ್ಯಾದಿಗಳಿಗೆ ಮುಹೂರ್ತಕ್ಕಾಗಿ ಹಲವರು, ಕಷ್ಟಪರಿಹಾರಕ್ಕಾಗಿ ಹೋಮ, ಹವನ ಮಾಡಿಸಲು ಹಲವರು, ಇಷ್ಟ ಕಾಮ್ಯಾರ್ಥ ಸಿದ್ಧಿಗಾಗಿ ವ್ರತ, ನೇಮ ಮಾಡಿಸಲು ಉತ್ಸುಕರು ಹಲವರಾದರೆ ವೆಂಕಟ್ರತ್ತೆಯಂತೆ ವಧೂವರರ ಜಾತಕದ ಹೊಂದಾಣಿಕೆಯ ಪರೀಕ್ಷೆಗಾಗಿ ಮಿಕ್ಕವರು. ವಿವಿಧ ಕಾರಣಗಳಿಗಾಗಿ ವಿವಿಧ ರೀತಿಯ ಜನರು ತುಂಬಿದ್ದವರು. ಜೋಯಿಸರ ಪತ್ನಿ ನಂಜಮ್ಮ ಬಾಗಿಲ ಬಳಿ ಚಾಪೆ ಹಾಕಿ ಕುಳಿತು ಬಂದವರಿಗೆ ಟೋಕನ್ ವಿತರಿಸಿ ಅದರ ಸಂಖ್ಯೆಗೆ ಅನುಗುಣವಾಗಿ ಒಬ್ಬೊಬ್ಬರನ್ನೇ ಕ್ಯೂನಲ್ಲಿ ಕಳುಹಿಸುತ್ತಿದ್ದರು. ಜನಕ್ಕೆ ದಿನದಿಂದ ದಿನಕ್ಕೆ ಧರ್ಮ ಶ್ರದ್ಧೆ ಹೆಚ್ಚುತ್ತಿದೆಯೋ ಅಥವಾ ತಾವು ಮಾಡುತ್ತಿರುವ ಅಧರ್ಮ ಮುಚ್ಚಿಕೊಳ್ಳಲು ಈ ಸೋಗೋ ತಿಳಿಯದೆ ವೆಂಕಟ್ರತ್ತೆ ಗೊಂದಲಗೊಂಡರು. ಮೂರು ಗಂಟೆ ಕಾದ ಬಳಿಕ ಜೋಯಿಸರೊಡನೆ ಮುಖಾಮುಖಿಯಾಯಿತು.

ಕೈಯಲ್ಲಿದ್ದ ಎರಡು ಜಾತಕಗಳನ್ನು ದಕ್ಷಿಣೆಯ ಜೊತೆ ಜೋಯಿಸರ ಮುಂದಿಟ್ಟು ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುವ ವಿದ್ಯಾರ್ಥಿಯಂತೆ ಕೈ ಹೊಸಕುತ್ತಾ ಕುಳಿತರು.

''ಇದೇನ್ತಾಯಿ? ಈ ಜಾತಕ ಇಷ್ಟು ಹಳದಿಗೆ ತಿರುಗಿದೆ? ಅಕ್ಷರವೂ ಮೋಡಿ. ಓದೋದೇ ಕಷ್ಟ.'' ಗಂಟೆಗಟ್ಟಲೆ ಜಾತಕಗಳನ್ನು ನೋಡಿ ನೋಡಿ ಬೇಸರಗೊಂಡಿದ್ದ ಜೋಯಿಸರು ಕನ್ನಡಕ ಮೂಗಿಗೇರಿಸುತ್ತಾ ತಮ್ಮ ಆಕ್ರೋಶ ಲಘುವಾಗಿ ಹೊರ ಹಾಕಿದರು.

''ಇದೊಂದೇ ಜಾತಕ ಹಾಗಾಗಿರೋದು. ಬರೋಕ್ಮುಂಚೆ ಊಟದ ಟೇಬಲ್ ಮೇಲೆ ಇಟ್ಟಿದ್ದೆ. ನಮ್ಮೆಜಮಾನ್ರು ಕಾಫಿ ಕುಡಿಯುತ್ತಾ ಕೈಜಾರಿ ಕಾಫಿ ಅದರ ಮೇಲೆ ಸಿಡೀತು. ಎಲ್ಲೋ ಸ್ವಲ್ಪ ಅಷ್ಟೆ. ಒಂದು ಭಾಗ ಚಿತ್ತಾಗಿದ್ರೂ ಹುಟ್ಟಿದ ದಿನಾಂಕ, ರಾಶಿ, ಅಂಶ ಕುಂಡಲಿಗಳು ಓದುವಂತಿವೆ. ಇನ್ನೊಂದು ಬಹಳ ಗರಿಗರಿಯಾಗಿದೆ. ಅಕ್ಷರಗಳೂ ಪ್ರಿಂಟ್ ಆಗಿವೆ. ನಿಮಗೆ ಓದೋಕ್ಕೆ ತೊಂದರೆಯಾಗೊಲ್ಲ, ಈ ವರ್ಷ ಜಾತಕಗಳು ಹೊಂದಾಣಿಕೆಯಾದ್ರೆ ಓಲಗ ಊದಿಸೋದು ಅಂತ ನಿರ್ಧರಿಸಿದ್ದೀನಿ.''

ಜೋಯಿಸರು ಮುಂದಿನ ಹತ್ತು ನಿಮಿಷಗಳು ಮುಂದಿದ್ದ ಸ್ಲೇಟಿನಲ್ಲಿ ಏನೇನೋ ಬರೆದು ಕೂಡಿ ಕಳೆದು ಗುಣಿಸಿ ಭಾಗಿಸಿ ಬೆರಳಿನಲ್ಲಿ ಎಣಿಕೆ ಮಾಡಿ ಕೊನೆಗೆ ತಮ್ಮ ತೀರ್ಪಿತ್ತರು.

''ಈ ಮದ್ವೆ ಮಾಡ್ಬಹುದು. ಏನೂ ತೊಂದ್ರೆ ಇಲ್ಲ. ಜಾತಕಗಳೆರಡೂ ತಕ್ಕ ಮಟ್ಟಿಗೆ ಹೊಂದಾಣಿಕೆಯಾಗತ್ತೆ. ಮುಖ್ಯವಾಗಿ ಗ್ರಹ ಮೈತ್ರಿ ಚೆನ್ನಾಗಿದೆ. ಆದ್ರೆ ಒಂದ್ಮಾತು. ನಾನು ಕೇವಲ ಜೋಯಿಸ. ಜ್ಯೋತಿಷ್ಯ ಹೇಳೋದಷ್ಟೆ ನನ್ನ ಕೆಲಸ ಅಂತ ನನಗೂ ಗೊತ್ತು. ಆದ್ರೂ, ನೀವು ತಪ್ಪು ತಿಳಿಯೋದಿಲ್ಲ ಅಂದ್ರೆ, ಹೇಳ್ತೀನಿ.''

ವೆಂಕಟ್ಲಕ್ಷ್ಮಿಗೆ ಬಾಯಿನ ದ್ರವ ಆರಿ ಎದೆ ಹೊಡೆದುಕೊಳ್ಳಲು ಇಷ್ಟೇ ಸಾಕಾಯಿತು. ''ಏನಾಗಿದೆ ಜೋಯಿಸರೇ. ಹುಡುಗಿ ಜಾತಕದಲ್ಲಿ ಏನಾದ್ರೂ ದೋಷ ಗೀಷ...''

''ಹಾಗೇನೂ ಇಲ್ಲಮ್ಮ. ಅದು ಶುದ್ಧ ಜಾತಕವೇ. ನೀವು ಸಾಕಷ್ಟು ವಿದ್ಯಾವಂತರಂತೆ, ತಿಳುವಳಿಕಸ್ಥರಂತೆ ಕಾಣ್ತೀರ. ನೀವೂ ಇಂಥಾ ಕೆಲ್ಸಕ್ಕೆ ಮುಂದಾಗೋದಾ?''

''ಇಂಥಾ ಕೆಲ್ಸ ಅಂದ್ರೆ, ಎಂಥದ್ದು? ಒಗಟಿನಂತೆ ಮಾತನಾಡದೆ ಬಿಡಿಸಿ ಹೇಳಿ. ನನ್ನ ವಿದ್ಯೆಗೂ ಇದಕ್ಕೂ ಏನು ಸಂಬಂಧ?''

''ಹೇಳ್ತೀನಿ ಕೇಳಿ ತಾಯಿ. ಈ ಜಾತಕ, ಅದೇ ಕಾಫಿ ಚೆಲ್ಲಿ ಚಿತ್ತಾಗಿರೋ ಮೋಡಿ ಅಕ್ಷರದ್ದು. ಈ ಜಾತಕನಿಗೆ ಐವತ್ತೆಂಟು ತುಂಬಿದೆ. ಗರಿಗರಿಯಾಗಿರೋ ಇನ್ನೊಂದು ಜಾತಕದ ಕನ್ಯೆಗೆ ಇಪ್ಪತ್ತು ವರ್ಷ. ಇಷ್ಟೊಂದು ಅಂತರವಿರೋವಾಗ ಮದುವೆ ಮಾಡ್ಸೋದಿರ್ಲಿ ಆ ಬಗ್ಗೆ ಯೋಚಿಸೋದೂ ಪಾಪಕಾರ್ಯ. ಹಳೆ ಕಾಲ್ದಲ್ಲಿ ಇಂತಹ ಮದ್ವೆಗ್ಳು ನಡೀತಿದ್ದವಂತೆ. ಈಗ ಕಾಲ ಬದ್ಲಾಗಿದೆ. ಸುದ್ದಿ ನಾಲಕ್ಕು ಜನಕ್ಕೆ ತಿಳದ್ರೆ ನಿಮ್ಮ ಮುಖಕ್ಕೆ ಛೀಮಾರಿ ಹಾಕ್ತಾರೆ. ಮಹಿಳಾ ಸಂಘಟನೆಗ್ಳು ಮನೆ ಮುಂದೆ ಧರಣಿ ಕೂತ್ಕೋತಾರೆ. ಈ ಜಾತಕದ ಪ್ರಕಾರ ಈ ವ್ಯಕ್ತಿಗೆ ಆಗ್ಲೆ ಒಮ್ಮೆ ಮದ್ವೆಯಾಗಿದೆ. ಈಗಾದ್ರೆ ಇದು ಎರಡನೇ ಸಂಬಂಧ. ಆದ್ದರಿಂದ ಮಗಳ ವಯಸ್ಸಿನ ಹುಡುಗಿಯೊಂದಿಗಿನ ಈ ಮದ್ವೇನ ನೀವು ಖಂಡಿತಾ ಮಾಡ್ಬಾರ್ದು. ನಾನು ಹೀಗೆ ಹೇಳ್ದೆ ಅಂತ ಕೋಪ ಮಾಡ್ಕೋಬೇಡಿ. ನನ್ನ ಮನಸ್ಸು ಇದನ್ನ ಖಂಡಿತಾ ಒಪ್ಪೊಲ್ಲ.


ವೆಂಕಟ್ಲಕ್ಷ್ಮಿ ಜೋಯಿಸರ ಹಿತವಾದ ಕೇಳಿ ಕೋಪಿಸಿಕೊಳ್ಳೋದಿರ್ಲಿ, ಹೊಟ್ಟೆ ಹಿಡಿದು ನಗತೊಡಗಿದರು. ಜೋಯಿಸರಿಗೆ ಈಗ ನಿಜವಾಗ್ಲೂ ರೇಗಿತು.

''ಯಾಕೆ ತಾಯಿ ಹೀಗೆ ನಗ್ತೀರ? ಈ ಜೋಯಿಸ ನಿಮ್ಗೆ ಜೋಕು ಹೇಳ್ತಾ ಇಲ್ಲ. ಬಹಳ ಗಂಭೀರವಾದ ವಿಷಯವನ್ನು ಹೇಳ್ತಾ ಇದ್ದೀನಿ.''

''ಅಯ್ಯೋ ಜೋಯಿಸ್ರೇ. ಈ ಜಾತಕ ಮದುವೆ ಗಂಡಿಂದಲ್ಲ. ನಂದು ಅಂದ್ರೆ ಮದ್ವೆ ಗಂಡಿನ ತಾಯೀದು, ನನಗೀಗ ಐವತ್ತೆಂಟು ವರ್ಷಗಳು.''

''ಇದು ನಿಮ್ಮ ಜಾತಕವೇ? ಏನು ತಮಾಷೆ ಮಾಡ್ತಿದ್ದೀರೇನಮ್ಮ? ಗಂಡು, ಹೆಣ್ಣಿನ ಜಾತಕ ತಂದ್ಕೊಡೋದು ಕೇಳಿದ್ದೀನಿ. ಹೀಗೆ ಅತ್ತೆ, ಸೊಸೆ ಜಾತಕ ಹೊಂದಿಸೋದು ನಾನೆಲ್ಲೂ ಕಂಡಿಲ್ಲ ಕೇಳಿಲ್ಲ.''

''ನಂಗೆ ಇರೋನು ಒಬ್ನೇ ಮಗ. ಈ ಮುದ್ಗಿ ಅವನ ಆಫೀಸಿನಲ್ಲಿ ಕೆಲಸ ಮಾಡ್ತಾಳೆ. ಈಗಿನ ಕಾಲ್ದೋರಿಗೆ ಹೇಳೋರಿಲ್ಲ ಕೇಳೋರಿಲ್ಲ. ಎಲ್ಲ ಅವರ ಮನಸ್ಸಿಗೆ ಬಂದಂತೇ ನಡೀಬೇಕು. ಇಬ್ರೂ ಲವ್ವೋ ಪವ್ವೊ ಮಾಡ್ತಾರಂತೆ. ನನ್ನ ಮಗ ಆದ್ರೆ ಅವ್ಳನ್ನೇ ಮದ್ವೆಯಾಗೋದು ಅಂತ ಹಟ ಹಿಡ್ದಿದ್ದಾನೆ. ಬರೋ ಸೊಸೆ ಮಗನ್ನ ನನ್ನಿಂದ ದೂರ ಮಾಡ್ತಾಳೇನೋ ಅನ್ನೋ ಭಯ ಕಾಡಿತು. ಅದಕ್ಕೇ ನಂದೂ ಅವಳ್ದೂ ಜಾತಕ ತಂದೆ. ಎರಡಕ್ಕೂ ಗೃಹಮೈತ್ರಿ ಇದೆ ಅಂದ್ರಿ. ಹೊಟ್ಟೆಗೆ ಹಾಲು ಹುಯ್ದಂಗಾಯ್ತು. ಇನ್ನೇನೂ ಯೋಚ್ನೆ ಇಲ್ಲ. ಆದಷ್ಟು ಬೇಗ ಮದುವೆ ಮಾಡ್ತೀನಿ. ನೀವೇ ಮುಂದೆ ನಿಂತು ಪೌರೋಹಿತ್ಯ ವಹಿಸಿ ಈ ಮದ್ವೆ ನಡೆಸಿಕೊಡ್ಬೇಕು'' ಎಂದು ಜೋಯಿಸರಿಗೆ ವೆಂಕಟ್ಟೆ ನಮಸ್ಕಾರ ಮಾಡಿದಳು.



Mailing Date 5th of every month
Reg. No.: CPMG/KA/BGW-544/2003-05

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999. Editor: M. SHIVAKUMAR